ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 295 RNI Number : KNKAN/25/A2770 08-11-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ:295 ರಾಯಚೂರು 08-11-2026 ರವಿವಾರ ಪುಟ 04 ಬೆಲೆ ರೂ.2/- Postal Reg Number:RCR/L/RNP/117/2026-28

ಕಾಂಗ್ರೆಸ್ಸಿ ನವರ ಅಧಿಕಾರದ ಮದ ಜನ ಇಳಿಸುತ್ತಾರೆ: ವಿಜಯೇಂದ್ರ



ಬೆಂಗಳೂರು : ಆಡಳಿತಾರೂಢ ಕಾಂಗ್ರೆಸ್ಸಿ ನವರ ಪಾಪದ ಕೊಡ ತುಂಬಿದೆ. ನಿಮ್ಮ ಅಹಂಕಾರ, ಅಧಿಕಾರದ ಮದವನ್ನು ವಿಧಾನ ಪರಿಷತ್ ಚುನಾವಣೆಯಲ್ಲಿ ಜನತೆ ಇಳಿಸಿದ್ದಾರೆ. ಮುಂಬರುವ ದಿನಗಳಲ್ಲಿಯೂ ರಾಜ್ಯದ ಜನತೆ ಪಾಠ ಕಲಿಸಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಸಿದ್ದಾರೆ.

ಶನಿವಾರ ನಗರದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಮನೆಗೆ ನೂರಾರು ಚೂರಿಗಳು ಮತ್ತು ಚಾಕುಗಳನ್ನು ಕಳುಹಿಸುವ ಮೂಲಕ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ಸಂಸ್ಕೃತಿಯನ್ನು ಅನಾವರಣಗೊಳಿಸುವ ಕೆಲಸ ಅವರು ಮಾಡಿದ್ದಾರೆ. ಗೂಂಡಾ ಸರಕಾರ ಎನ್ನುವುದನ್ನು ದೇಶದ ಜನತೆಗೆ ತೋರಿಸಿಕೊಟ್ಟಿದ್ದಾರೆ ಎಂದು ಆಕ್ಷೇಪಿಸಿದರು.

ಕೊತ್ವಾಲ್ ಗುಣ: ಕೊತ್ವಾಲ್ ರಾಮಚಂದ್ರ ಇಲ್ಲ. ಆದರೆ ಕೊತ್ವಾಲ್ ರಾಮಚಂದ್ರ ಜೊತೆಯಲ್ಲಿ ಗೂಂಡಾಗಿರಿ ಮಾಡಿಕೊಂಡು ಬಂದಂತವರು ಕಾಂಗ್ರೆಸ್ ಪಕ್ಷದ ವ್ಯವಸ್ಥೆಯಲ್ಲೂ ಇದ್ದಾರೆ. ಹುಟ್ಟು ಗುಣ ಸುಟ್ಟರೂ ಹೋಗಲ್ಲ ಅನ್ನುವಂತೆ ಇವರ ವರ್ತನೆ ಇದೆ. ಸರಕಾರ ಹತಾಶ ಸ್ಥಿತಿಯಲ್ಲಿದೆ. ಇವರ ವರ್ತನೆಯನ್ನು ಯಾರೂ ಕ್ಷಮಿಸುವುದಕ್ಕೆ ಸಾಧ್ಯ ಇಲ್ಲ ಎಂದು ತಿಳಿಸಿದರು.

ಹತಾಶೆ ಯಾಕೆ?: ಪ್ರಿಯಾಂಕ್ ಖರ್ಗೆ ಕೇಂದ್ರ ಸಚಿವ ಕುಮಾರ ಸ್ವಾಮಿ ಅವರ ಬಗ್ಗೆ ಹಳ್ಳಿ ಗುಗ್ಗು ಎನ್ನುತ್ತಾರೆ. ಗೃಹ ಸಚಿವರಾಗಿ ಮಾತಾಡುವ ಮಾತೇ ಇದು. ಕಾಂಗ್ರೆಸ್ಸಿ ನವರು ಚುನಾಯಿತ ಪ್ರಧಾನಿ ಮೋದಿಯವರ ಕುರಿತು ಹಗುರ ಮಾತನಾಡುತ್ತಾರೆ. ಅವರ ತಂದೆ-ತಾಯಿಯನ್ನೂ ಟೀಕಿಸಿದ್ದಾರೆ. ಮಲ್ಲಿಕಾರ್ಜುನ ಖರ್ಗೆಯವರು ಬಿಹಾರದಲ್ಲಿ ಮೋದಿ ಅವರ ತಂದೆ ಬಗ್ಗೆ ಟೀಕೆ ಮಾಡಿದ್ದು, ಕಾಂಗ್ರೆಸಿಗರು ಹತಾಶರಾಗಿದ್ದಾರೆ ಎಂದು ಟೀಕಿಸಿದರು.

ಒಗ್ಗೂಡಿ ನಡೆಯುತ್ತೇವೆ: ಬಿಜೆಪಿ-ಜೆಡಿಎಸ್ ಒಟ್ಟಾಗಿ ಹೋಗಬೇಕು ಎಂದು ಎಲ್ಲ ಹಿರಿಯರ ಅಪೇಕ್ಷೆಯೂ ಇದೆ. ಆ ನಿಟ್ಟಿನಲ್ಲಿ ನಾವು ಮುಂದೆ ಹೋಗುತ್ತೇವೆ. ಲಂಚ ಇಲ್ಲದೇ ಈ ಕಾಂಗ್ರೆಸ್ ಸರಕಾರದಲ್ಲಿ ಏನೂ ನಡೆಯುತ್ತಿಲ್ಲ. ಇದರ ಕುರಿತು ಉಭಯ ಸದನದಲ್ಲಿ ಮಾತನಾಡುತ್ತೇವೆ ಎಂದು ಹೇಳಿದರು.

ಮೋದಿ ಸರ್ಕಾರದ ಅಡಿ ಭಾರತದ ರಚನೆಗೆ ಹಾನಿ; ಸೋನಿಯಾ ಗಾಂಧಿ ಗಂಭೀರ ಆರೋಪ



ನವದೆಹಲಿ: ಕಳೆದ 12 ವರ್ಷದಲ್ಲಿ ಭಾರತದ ಮೂಲ ಸ್ವರೂಪ, ಪ್ರಜಾಪ್ರಭುತ್ವ ಮತ್ತು ಸಂಸ್ಥೆಗಳಿಗೆ ಭಾರಿ ಹಾನಿಯಾಗಿದೆ. ಮೋದಿ ಸರ್ಕಾರ ನಿರ್ಗಮಿಸಿದ ನಂತರವೂ, ದೇಶದ ವ್ಯವಸ್ಥೆಗಳನ್ನು ಮತ್ತೆ ಸುಸ್ಥಿತಿಗೆ ತರಲು ಸಮಯ ಬೇಕಾಗುತ್ತದೆ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಗಂಭೀರ ಆರೋಪ ಮಾಡಿದ್ದಾರೆ.

ತಮ್ಮ 'ಬಿಲಾಂಗಿಂಗ್ : ಎ ಜರ್ನಿ ಆಫ್ ಲವ್' ಪುಸ್ತ ಬಿಡುಗಡೆಗೆ ಮುನ್ನ ಪತ್ರಿಕೆಯೊಂದರ ಸಂದರ್ಶನದಲ್ಲಿ ಮಾತನಾಡಿದ ಅವರು, ಜನರು ಅಸಮಾಧಾನಿತರಾಗಿದ್ದು, ಆಗಿರುವ ಹಾನಿಯನ್ನು ಗುರುತಿಸುತ್ತಿದ್ದಾರೆ. ಆದರೆ, ನಾನು ಆಶಾವಾದಿ. ಸೂಕ್ತ ಆಡಳಿತ ಸಿಕ್ಕಾಗ ಭಾರತ ಮತ್ತೆ ಸುಸ್ಥಿತಿಗೆ ಬರುತ್ತದೆ ಎಂಬುದು ನನಗೆ ತಿಳಿದಿದೆ ಎಂದರು.

ಕಳೆದ 12ವರ್ಷದಲ್ಲಿ ಭಾರತದ ರಚನೆಗೆ, ಪ್ರಜಾಪ್ರಭುತ್ವ ಮತ್ತು ನಮ್ಮ ಸಂಸ್ಥೆಗಳಿಗೆ ಭಾರಿ ಹಾನಿಯಾಗಿದೆ. ಈ ಸರ್ಕಾರ ಹೋದ ಬಳಿಕ ಈ ವ್ಯವಸ್ಥೆಯ ಆರೋಗ್ಯಯುತಗೊಳಿಸಲು ಸಮಯಬೇಕು. ಇದಕ್ಕೆ ರಾಜಕೀಯ ಪಕ್ಷಗಳಿಂದ ಅಪಾರ ಪ್ರಯತ್ನದ ಅಗತ್ಯವಿದೆ ಎಂದರು.

ಕಾಂಗ್ರೆಸ್ ವರ್ಚಸ್ಸು ಕುಗ್ಗುವಿಕೆ ಮತ್ತು ಪ್ರಸ್ತುತ ಸ್ಥಿತಿ ಮತ್ತು ಭವಿಷ್ಯದ ಸಾಧ್ಯತೆಗಳ ಕುರಿತಾದ ಪ್ರಶ್ನೆಗೆ ಉತ್ತರಿಸಿದ ಅವರು, ನಾವು ಅಷ್ಟೊಂದು ನಿರಾಶಾವಾದಿಯಲ್ಲ. ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಕಾಂಗ್ರೆಸ್ ಮತ್ತು ವಿಪಕ್ಷಗಳಿಗೆ ಸಮಾನವಾದ ಹಕ್ಕು ಸಿಕ್ಕಿಲ್ಲ ಎಂಬುದನ್ನು ಗಮನಿಸಿದ್ದೇವೆ

ಎಲ್ಲ ಸಂಸ್ಥೆಗಳ ಮೇಲೆ ವಿಶೇಷವಾಗಿ ಚುನಾವಣಾ ಆಯೋಗದ ಮೇಲೆ ಅವರಿಗಿರುವ ಸಂಪೂರ್ಣ ಹಿಡಿತ, ಮುಖ್ಯವಾಹಿನಿ ಮಾಧ್ಯಮಗಳ ಮೇಲಿನ ಅವರ ನಿಯಂತ್ರಣ, ಅವರ ಹಣಬಲ ಮತ್ತು ಧರ್ಮದ ದುರ್ಬಳಕೆ ಇವೆಲ್ಲವೂ ಗಮನದಲ್ಲಿದೆ.

ಆದರೂ ನಮ್ಮ ಪಕ್ಷ ಹೋರಾಟ ಮಾಡುತ್ತಿದ್ದು, ಪ್ರಗತಿ ಸಾಧಿಸುತ್ತಿದೆ. ನಿಜವಾದ ಅಂಶಗಳು ಎಂದರೆ, ಈ ಆಕ್ರಮಣವನ್ನು ಎದುರಿಸಿ ನಿಲ್ಲುವ ಪಕ್ಷ ಕಾಂಗ್ರೆಸ್ ಆಗಿದೆ. ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ಎಲ್ಲ ರೀತಿಯ ಕಿರುಕುಳವನ್ನು ಎದುರಿಸಿದ್ದಾರೆ. ಆದರೂ, ಪ್ರತಿ ಹಳ್ಳಿಯಲ್ಲಿ ಮತ್ತು

3ನೇ ಪುಟಕ್ಕೆ

ಬೆಲೆ ಏರಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆ

ಭಿಕ್ಷಾಪಾತ್ರೆ ಹಿಡಿದು ಕಾಂಗ್ರೆಸ್ ಸರ್ಕಾರದ ವಿರುದ್ಧ ಆಕ್ರೋಶ



ರಾಯಚೂರು

ರಾಜ್ಯ ಕಾಂಗ್ರೆಸ್ ಸರ್ಕಾರದ ಬೆಲೆ ಏರಿಕೆ ನೀತಿಯನ್ನು ಖಂಡಿಸಿ ಭಾರತೀಯ ಜನತಾ ಪಕ್ಷದ ರಾಯಚೂರು ಜಿಲ್ಲಾ ಘಟಕದ ವತಿಯಿಂದ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ನಂದಿನಿ ಹಾಲು, ಮೊಸರು ಹಾಗೂ ತುಪ್ಪದ ದರ ಹೆಚ್ಚಳ ಮತ್ತು ಕೆಎಸ್ಆರ್‌ಟಿಸಿ ಹಾಗೂ ಬಿಎಂಟಿಸಿ ಬಸ್ ಪ್ರಯಾಣ ದರ ಏರಿಕೆಯನ್ನು ಖಂಡಿಸಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯ ವೇಳೆ ಕಾರ್ಯಕರ್ತರು ಭಿಕ್ಷಾಪಾತ್ರೆ ಹಿಡಿದು ಸಾರ್ವಜನಿಕರಿಂದ ಭಿಕ್ಷೆ ಬೇಡುವ ಮೂಲಕ ವಿನೂತನವಾಗಿ ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಸಾಧ್ಯವಾಗದೆ ಜನರ ಮೇಲೆ ತೆರಿಗೆ ಹಾಗೂ ಅಗತ್ಯ ವಸ್ತುಗಳ ದರ ಏರಿಕೆಯ ಹೊರೆ ಹೇರುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಹಾಲು, ಮೊಸರು ಮತ್ತು ತುಪ್ಪದ ದರ ಹೆಚ್ಚಳದಿಂದ ಬಡವರು ಹಾಗೂ ಮಧ್ಯಮ ವರ್ಗದ ಕುಟುಂಬಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿದೆ. ಕೆಎಸ್ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್ ಪ್ರಯಾಣ ದರ ಏರಿಕೆಯಿಂದ ವಿದ್ಯಾರ್ಥಿಗಳು, ನೌಕರರು ಸೇರಿದಂತೆ ನಿತ್ಯ ಪ್ರಯಾಣಿಸುವ ಜನರು ತೊಂದರೆ ಅನುಭವಿಸುವಂತಾಗಿದೆ ಎಂದು ಹೇಳಿದರು.

ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಇದೀಗ ಜನಸಾಮಾನ್ಯರ ಮೇಲೆ ಬೆಲೆ ಏರಿಕೆಯ ಹೊರೆ ಹಾಕುತ್ತಿದೆ. ಸಾರಿಗೆ ಇಲಾಖೆಯ ದರ ಹೆಚ್ಚಳದಿಂದ ಜನರಿಗೆ ಮತ್ತಷ್ಟು ಸಂಕಷ್ಟ ಉಂಟಾಗಿದೆ. ಸರ್ಕಾರದ ಆರ್ಥಿಕ ನಿರ್ವಹಣೆ ಹಾಗೂ ಜನಪರ ಆಡಳಿತದ ಕುರಿತು ಹಲವು ಪ್ರಶ್ನೆಗಳು ಉದ್ಭವಿಸಿವೆ ಎಂದು ಬಿಜೆಪಿ ಮುಖಂಡರು ದೂರಿದರು.

ಗ್ಯಾರಂಟಿ ಯೋಜನೆಗಳಿಗೆ ಅಗತ್ಯ ಹಣ ಕ್ರೋಡೀಕರಿಸಲು ಸಾಧ್ಯವಾಗದೆ ಜನರ ಮೇಲೆ ತೆರಿಗೆ

3ನೇ ಪುಟಕ್ಕೆ

ಮೀರಾಪುರ ಗ್ರಾಮದಲ್ಲಿ ₹7.05 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಬಸನಗೌಡ ದದ್ದಲ್ ಭೂಮಿ ಪೂಜೆ

ರಾಯಚೂರು

ರಾಯಚೂರು ಗ್ರಾಮೀಣ ಕ್ಷೇತ್ರದ ಮೀರಾಪುರ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶನಿವಾರ ಶಾಸಕ ಬಸನಗೌಡ ದದ್ದಲ್ ಭೂಮಿಪೂಜೆ ನೆರವೇರಿಸಿದರು.



ಪ್ರಗತಿ ಪಥ ಯೋಜನೆಯಡಿ ಮೀರಾಪುರದಿಂದ ಇಡಪನೂರುವರೆಗೆ ₹2.55 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಬಿಟಿ ರಸ್ತೆ ಕಾಮಗಾರಿಗೆ ಚಾಲನೆ ನೀಡಿದರು.

ಕಾಮಗಾರಿಯನ್ನು ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಂಜಿಎಸ್‌ವೈ) ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದ್ದು

ಅದೇ ರೀತಿ ಕೆಕೆಆರ್‌ಡಿಬಿ ಮ್ಯಾಕ್ರೋ ಯೋಜನೆಯಡಿ ₹4.50 ಕೋಟಿ ಅನುದಾನದಲ್ಲಿ ಸಿಸಿ ರಸ್ತೆ, ಸೇತುವೆ ನಿರ್ಮಾಣ ಹಾಗೂ ಇಡಪನೂರಿನಿಂದ ಗುಂಜಳ್ಳಿವರೆಗೆ ಬಿಟಿ ರಸ್ತೆ ನಿರ್ಮಾಣ ಕಾಮಗಾರಿಗಳಿಗೂ ಭೂಮಿಪೂಜೆ ನೆರವೇರಿಸಿದರು.ಈ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆ (ಪಿಡಬ್ಲ್ಯುಡಿ) ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು ಒಟ್ಟು ₹7.05 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ದೊರೆತಿರುವುದರಿಂದ ಮೀರಾಪುರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರಸ್ತೆ ಸಂಪರ್ಕ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಅನುಕೂಲವಾಗಲಿದೆ ಎಂದು ತಹೇಳಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯ ಮುಖಂಡರು, ಸುತ್ತಮುತ್ತಲಿನ ಗ್ರಾಮಗಳ ಪ್ರಮುಖರು, ಗ್ರಾಮಸ್ಥರು, ನಾಮನಿರ್ದೇಶಿತ ಸದಸ್ಯರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಭೀಮ್ ಆರ್ಮಿ ಜಿಲ್ಲಾ ಉಪಾಧ್ಯಕ್ಷರಾಗಿ ಡಾ. ಎಚ್.ಎಂ.ಬಾಬು ನೇಮಕ

ರಾಯಚೂರು:-ಭೀಮ್ ಆರ್ಮಿ ಭಾರತ ಏಕತಾ ಮಿಷನ್ ಸಂಘಟನೆಯ ರಾಯಚೂರು ಜಿಲ್ಲಾ ಉಪಾಧ್ಯಕ್ಷರಾಗಿ ಸಾಮಾಜಿಕ ಹೋರಾಟಗಾರ ಡಾ. ಎಚ್.ಎಂ. ಬಾಬು ಅವರನ್ನು ನೇಮಕ ಮಾಡಲಾಗಿದೆ.



ಜಿಲ್ಲಾಧ್ಯಕ್ಷ ವಿಶ್ವನಾಥ್ ಬಲಿದೇವ್ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಾಬಾ ಖಾನ್ ಅವರ ಜಿಲ್ಲಾ ಕಾರ್ಯದರ್ಶಿ ಮೋಹನ್ ಬಲಿದೆವು ರವರ ನೇತೃತ್ವದಲ್ಲಿ ನೇಮಕಾತಿ ಆದೇಶ ನೀಡಲಾಯಿತು.

ಕಳೆದ ಹಲವು ವರ್ಷಗಳಿಂದ ಸಾಮಾಜಿಕ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಡಾ. ಎಚ್.ಎಂ. ಬಾಬು ಅವರು ಬಡವರು, ನಿರ್ಗತಿಕರು ಹಾಗೂ ವಿದ್ಯಾರ್ಥಿಗಳ ಹಕ್ಕುಗಳಿಗಾಗಿ ಧ್ವನಿ ಎತ್ತುತ್ತಾ ಬಂದಿದ್ದಾರೆ. ಭೂ ಒತ್ತುವರಿ ವಿರುದ್ಧ ಹೋರಾಟ ನಡೆಸಿ ಭೂವಂಚಿತರಿಗೆ ನ್ಯಾಯ ಕೊಡಿಸುವುದು, ರೈತರ ಬೆಳೆಗಳಿಗೆ ನ್ಯಾಯಯುತ ಬೆಲೆ ದೊರಕಿಸುವುದು ಹಾಗೂ ಎಪಿಎಂಸಿ ಸಮಸ್ಯೆಗಳು ಸೇರಿದಂತೆ ಸರ್ಕಾರಿ ಇಲಾಖೆಗಳಲ್ಲಿನ ಭ್ರಷ್ಟಾಚಾರ ಮತ್ತು ಅಧಿಕಾರಿಗಳ ಅಕ್ರಮಗಳ ವಿರುದ್ಧ ನಿರಂತರ ಹೋರಾಟ ನಡೆಸಿರುವುದನ್ನು ಗುರುತಿಸಿ ಈ ಜವಾಬ್ದಾರಿ ನೀಡಲಾಗಿದೆ.

ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಶೋಷಿತ ಸಮುದಾಯಗಳ ಹಕ್ಕುಗಳ ರಕ್ಷಣೆಗಾಗಿ ಸಂಘಟನೆಯ ಮೂಲಕ ಮತ್ತಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ವಿಶ್ವಾಸವನ್ನು ಸಂಘಟನೆಯ ಪದಾಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

ಲಿಂಗಸುಗೂರು ಪೊಲೀಸರ ಬೆಳ್ಳಂಬೆಳಗ್ಗೆ ಭರ್ಜರಿ ಬೇಟೆ: ಅಕ್ರಮ ಸಾಗೋಣಿ ಮರ ಸಾಗಾಟದ ಮೂರು ಪಿಕಪ್ ವಾಹನಗಳು ವಶಕ್ಕೆ!

ಲಿಂಗಸುಗೂರು:

ಅಕ್ರಮವಾಗಿ ಸಾಗೋಣಿ ಮರ ಮರಗಳನ್ನು ಸಾಗಾಟ ಮಾಡುತ್ತಿದ್ದ ಮೂರು ಪಿಕಪ್ ಬೊಲೆರೊ ವಾಹನಗಳನ್ನು ಲಿಂಗಸುಗೂರು ಪಟ್ಟಣದ ಪೊಲೀಸರು ಬೆಳ್ಳಂಬೆಳಗ್ಗೆ ವಶಕ್ಕೆ ಪಡೆದು ಭರ್ಜರಿ ಕಾರ್ಯಾಚರಣೆ ನಡೆಸಿದ್ದಾರೆ.

ಚಿಕ್ಕ ಉಪ್ಪೇರಿಯಿಂದ ಲಿಂಗಸುಗೂರು ಮಾರ್ಗವಾಗಿ ಸಾಗುತ್ತಿದ್ದ ಮೂರು ವಾಹನಗಳನ್ನು ಶುಕ್ರವಾರ ಬೆಳಗಿನ ಜಾವ ಸುಮಾರು 5 ಗಂಟೆಯ ವೇಳೆಗೆ ಖಚಿತ ಮಾಹಿತಿ ಆಧಾರದ ಮೇಲೆ ಪೊಲೀಸರು ತಡೆದು ಪರಿಶೀಲಿಸಿ ಜಪ್ತಿ ಮಾಡಿದ್ದಾರೆ. ಈ ವಾಹನಗಳಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಬೆಲೆಬಾಳುವ ಸಾಗೋಣಿ ಮರಗಳನ್ನು ಅಕ್ರಮವಾಗಿ ಸಾಗಿಸಲಾಗುತ್ತಿತ್ತು ಎನ್ನಲಾಗಿದೆ.



ಪೊಲೀಸರು ವಶಕ್ಕೆ ಪಡೆದಿರುವ ವಾಹನಗಳ ನೋಂದಣಿ ಸಂಖ್ಯೆಗಳು ಕೆಎ-36 ಡಿ-0078, ಕೆಎ-36 ಸಿ-8406 ಹಾಗೂ ಕೆಎ-42 ಬಿ-3196 ಆಗಿವೆ.

ಒಂದು ಕಡೆ ಬೆಲೆಬಾಳುವ ಸಾಗೋಣಿ ಮರಗಳ ಅಕ್ರಮ ಕಡಿತ ಮತ್ತು ಸಾಗಾಟ ಆತಂಕ ಮೂಡಿಸಿದ್ದರೆ, ಮತ್ತೊಂದೆಡೆ ಈ ದಂಧೆಯ ಹಿಂದೆ ಯಾರ ಕೈವಾಡವಿದೆ? ಯಾರ ನೇತೃತ್ವದಲ್ಲಿ ಇಂತಹ ಅಕ್ರಮ ಚಟುವಟಿಕೆಗಳು ನಡೆಯುತ್ತಿವೆ? ಎಂಬ ಪ್ರಶ್ನೆಗಳು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿವೆ.

ಈ ಕುರಿತು ಪತ್ರಕರ್ತರಿಗೆ ಮಾಹಿತಿ ನೀಡಿದ ಲಿಂಗಸುಗೂರು ಪೊಲೀಸ್ ಠಾಣೆಯ ಸಿಪಿಐ ಹೊಸಗೆರಪ್ಪ ಅವರು ಕಾರ್ಯಾಚರಣೆಯ ವಿವರಗಳನ್ನು ತಿಳಿಸಿದ್ದು, ವಿಷಯ ತಿಳಿಯುತ್ತಿದ್ದಂತೆ ಡಿವೈಎಸ್ಪಿ ಸುಲೇಮಾನ್ ತಹಶೀಲ್ದಾರ್ ಅವರು ಪರಿಶೀಲನೆ ನಡೆಸಿ ತನಿಖೆಗೆ ಚುರುಕು ನೀಡಿದ್ದಾರೆ.

3ನೇ ಪುಟಕ್ಕೆ

ಸ್ವಾಮಿನಾಥನ್ ಆಯೋಗದ ಶಿಫಾರಸು ಜಾರಿಗೆ ಎರಡು ತಿಂಗಳ ಗಡುವು:ರೈತರ ಸಂಪೂರ್ಣ ಸಾಲ ಮನ್ನಾಕ್ಕೆ ಆಗ್ರಹ



ರಾಯಚೂರು

ರೈತರು ಬೆಳೆದ ಎಲ್ಲ ಕೃಷಿ ಉತ್ಪನ್ನಗಳಿಗೆ ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಸಮಗ್ರ ಉತ್ಪಾದನಾ ವೆಚ್ಚದ ಮೇಲೆ ಶೇ.50 ರಷ್ಟು ಲಾಭಾಂಶ ಸೇರಿಸಿ ಕನಿಷ್ಠ ಬೆಂಬಲ ಬೆಲೆ ಘೋಷಿಸಬೇಕು. ಬೆಂಬಲ ಬೆಲೆಗಿಂತ ಕಡಿಮೆ ದರದಲ್ಲಿ ಉತ್ಪನ್ನಗಳನ್ನು ಖರೀದಿಸುವುದನ್ನು ತಡೆಯಲು ಕಾನೂನು ರೂಪಿಸಬೇಕು. ಈ ಬೇಡಿಕೆಗಳನ್ನು ಎರಡು ತಿಂಗಳೊಳಗೆ ಈಡೇರಿಸದಿದ್ದರೆ ರಾಷ್ಟ್ರಮಟ್ಟದಲ್ಲಿ ರೈತ ಚಳವಳಿ ಆರಂಭಿಸಲಾಗುವುದು ಎಂದು ಎಂ.ಎಸ್. ಸ್ವಾಮಿನಾಥನ್ ಆಯೋಗದ ವರದಿ ಜಾರಿ ಹೋರಾಟ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಶರಣಪ್ಪ ಮರಳಿ ಸುಲ್ತಾನಪುರ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.ನಗರದ ಪತ್ರಿಕಾ ಭವನದಲ್ಲಿ ಶನಿವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಆಹಾರ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸುವ ರೈತರು ಇಂದು ಆರ್ಥಿಕ ಸಂಕಷ್ಟದಿಂದ ಕಂಗಾಲಾಗಿದ್ದಾರೆ. ಕೃಷಿಗೆ ಅಗತ್ಯವಾದ ಬೀಜ, ಗೊಬ್ಬರ, ಔಷಧ, ಯಂತ್ರೋಪಕರಣ ಹಾಗೂ ಕೂಲಿ ವೆಚ್ಚ ನಿರಂತರವಾಗಿ ಏರಿಕೆಯಾಗುತ್ತಿದ್ದರೂ, ಮಾರುಕಟ್ಟೆಯಲ್ಲಿ ಬೆಳೆಗಳಿಗೆ ನಿರೀಕ್ಷಿತ ಬೆಲೆ ದೊರೆಯುತ್ತಿಲ್ಲ. ಪರಿಣಾಮವಾಗಿ ಕೃಷಿಕರು ಸಾಲದ ಹೊರೆ ಹೆಚ್ಚಿಸಿಕೊಂಡು ಸಂಕಷ್ಟ ಅನುಭವಿಸುವಂತಾಗಿದೆ ಎಂದು ತಿಳಿಸಿದರು.

ಹಸಿರು ಕ್ರಾಂತಿಯಿಂದ ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಳವಾಗಿದ್ದರೂ, ಕೃಷಿ ವೆಚ್ಚಕ್ಕೆ ಅನುಗುಣವಾಗಿ ಉತ್ಪನ್ನಗಳ ಬೆಲೆ ಏರಿಕೆಯಾಗಿಲ್ಲ. ಕನಿಷ್ಠ ಬೆಂಬಲ ಬೆಲೆ ನಿಗದಿಯಲ್ಲಿ ರೈತರ ನೈಜ ಉತ್ಪಾದನಾ ವೆಚ್ಚವನ್ನು ಪರಿಗಣಿಸಬೇಕು. ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಶಿಫಾರಸುಗಳ ಜೊತೆಗೆ ಸ್ವಾಮಿನಾಥನ್ ಆಯೋಗದ ಸೂತ್ರವನ್ನೂ ಅಳವಡಿಸಿ ಎಲ್ಲ ಬೆಳೆಗಳಿಗೂ ನ್ಯಾಯಯುತ ಬೆಲೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

3ನೇ ಪುಟಕ್ಕೆ

ಮುನ್ನೂರು ಕಾಪು ಸಮಾಜದಿಂದ ವೀರಹನುಮಾನ, ಹೇಮರೆಡ್ಡಿ ಎನ್‌ರಿಗೆ ಅದ್ದೂರಿ ಸನ್ಮಾನ ಸಮಾರಂಭ

ರಾಯಚೂರು, ನ. 07-ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ ಸಾಹಿತಿ ವೀರ ಹನುಮಾನ್ ಅವರಿಗೆ ರಾಜ್ಯೋತ್ಸವದ ಪ್ರಶಸ್ತಿ ದೊರೆತಿರುವುದು ಜಿಲ್ಲೆಯ ಎಲ್ಲಾ ಸಾಹಿತಿಗಳಿಗೆ ದೊರೆತಿರುವ ಬಹುದೊಡ್ಡ ಕೊಡುಗೆ ಎಂದು ಮಾಜಿ ಸಚಿವರು ಹಾಗೂ ವಿಧಾನಪರಿಷತ್ ಸದಸ್ಯರಾದ ಎನ್ ಎಸ್ ಬೋಸರಾಜು ಅವರು ಹೇಳಿದರು.



ಅವರಿಂದು ನಗರದ ಮುನ್ನೂರುವಾಡಿ ಬಡಾವಣೆಯ ಲಕ್ಷ್ಮಿದೇವಿ ಕಲ್ಯಾಣ ಮಂಟಪದಲ್ಲಿ ಮುನ್ನೂರು ಕಾಪು ಸಮಾಜದ ವತಿಯಿಂದ ಆಯೋಜಿಸಿದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಸಾಹಿತಿ ವೀರಹನುಮಾನ ಹಾಗೂ ರಾಜ್ಯ ವರ್ಣಕಲಾ ಪ್ರಶಸ್ತಿ ಪುರಸ್ಕೃತ ಹೇಮರೆಡ್ಡಿ ಎನ್ ಅವರ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ವೀರಹನುಮಾನ್ ಅವರಿಗೆ ದೊರೆತಿರುವ ಪ್ರಶಸ್ತಿ ಕೇವಲ ರಾಯಚೂರು ಜಿಲ್ಲೆಗೆ ಮಾತ್ರವಲ್ಲ ಸಾಹಿತ್ಯ ಕ್ಷೇತ್ರಕ್ಕೆ ದೊರತ ಕೊಡುಗೆ ಎಂದರು.

ವೀರ ಹನುಮಾನ್ ಅವರು ಕೇವಲ ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರವಲ್ಲದೆ, ಎಲ್ಲಾ ರಂಗಗಳಲ್ಲಿ ಗುರುತಿಸಿಕೊಂಡಿರುವ ಸುಸಂಸ್ಕೃತಿ ನಾಯಕರು.

ಎಲ್ಲಾ ಸಮುದಾಯದ ಜನರಿಗೆ ಮುನ್ನೂರು ಕಾಪು ಸಮಾಜದ ಮಾದರಿಯಾಗಿದೆ. ಮುಂಗಾರು ಹಬ್ಬ ಸೇರಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಮಾಡುವ ಮೂಲಕ ಸಾಹಿತ್ಯ ಲೋಕದಲ್ಲಿ ಗುರುತಿಸಿಕೊಂಡ ಸಾಹಿತಿ ವೀರಹನುಮಾನ್ ಅವರಿಗೆ ಸನ್ಮಾನ ಮಾಡುತ್ತಿರುವ ಕಾರ್ಯ ಅತ್ಯಂತ ಶ್ಲಾಘನಿಯ.ಮುನ್ನೂರು ಕಾಪು ಸಮಾಜ ಸಾಂಸ್ಕೃತಿಕ ರಾಯಭಾರಿ ಎನ್ನುವದಕ್ಕೆ ಸಾಹಿತಿ ವೀರಹನುಮಾನ್ ಅವರಿಗೆ ಸನ್ಮಾನ ಮಾಡುತ್ತಿರುವ ಕಾರ್ಯ ಪ್ರಮುಖ ನಿರ್ದೇಶನವಾಗಿದೆ.

3ನೇ ಪುಟಕ್ಕೆ

ಜನಗಣತಿಯಲ್ಲಿ ಯಾವುದೇ ಮನೆ, ವ್ಯಕ್ತಿ ಬಿಟ್ಟುಹೋಗದಂತೆ ಎಚ್ಚರ ವಹಿಸಿ: ಸುರೇಖಾ



ಬೀದರ್

2027ರ ಜನಗಣತಿಯಲ್ಲಿ ಯಾವುದೇ ಮನೆ ಅಥವಾ ವ್ಯಕ್ತಿ ಬಿಟ್ಟುಹೋಗದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು. ಮುಂಬರುವ ಜನಗಣತಿ ಪ್ರಕ್ರಿಯೆಯ ಎರಡನೇ ಹಂತದ ಸಿದ್ಧತೆಗಳು ಹಾಗೂ ಮೇಲ್ವಿಚಾರಣಾ ಮಾರ್ಗಸೂಚಿಗಳ ಕುರಿತು ಈಗಾಗಲೇ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಸುರೇಖಾ ತಿಳಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಗುರುವಾರ ಭಾರತ ಜನಗಣತಿ-2027ರ ಎರಡನೇ ಹಂತದ ಕಾರ್ಯಾಚರಣೆಗಾಗಿ ಜನಗಣತಿ ಕಾರ್ಯದಲ್ಲಿ ತೊಡಗಿಸಿಕೊಳ್ಳಲಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜನಗಣತಿಯ ಮೊದಲ ಹಂತದಲ್ಲಿ ಯಶಸ್ವಿಯಾಗಿ ಪೂರ್ಣಗೊಂಡಿರುವ ಮನೆಗಳ ಪಟ್ಟಿ ಮಾಡುವಿಕೆಯ ಬ್ಲಾಕ್‌ಗಳನ್ನು ಇದೀಗ ಜನಸಂಖ್ಯೆ ಗಣತಿಯ ಎರಡನೇ ಹಂತಕ್ಕೆ ವರ್ಗಾಯಿಸಲಾಗುವುದು. ಮೊದಲ ಹಂತದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದ ಗಣತಿದಾರರು (ಎನ್ಯುಮರೇಟರ್‌ಗಳು) ಮತ್ತು ಮೇಲ್ವಿಚಾರಕರು ತಮ್ಮ ಜವಾಬ್ದಾರಿಗಳನ್ನು ಮುಂದುವರಿಸಲಿದ್ದಾರೆ ಎಂದರು.

ಪ್ರತಿ ಕುಟುಂಬದ ಪ್ರತಿಯೊಬ್ಬ ಸದಸ್ಯರ ಮಾಹಿತಿಯನ್ನು ದಾಖಲಿಸುವುದು ಈ ಹಂತದ ಮುಖ್ಯ ಉದ್ದೇಶವಾಗಿದೆ. ಈ ಬಾರಿಯ ಜನಗಣತಿ ಸಂಪೂರ್ಣವಾಗಿ ಡಿಜಿಟಲ್ ರೂಪದಲ್ಲಿ ನಡೆಯಲಿದ್ದು, ಮೊಬೈಲ್ ಆ್ಯಪ್ ಮತ್ತು ಸಿಎಂಎಸ್ ಪೋರ್ಟಲ್ ಮೂಲಕ ಮೇಲ್ವಿಚಾರಣೆ ಹಾಗೂ ಸ್ವಯಂ ಜನಗಣತಿ ಸೌಲಭ್ಯ ಕಲ್ಪಿಸಲಾಗಿದೆ. ಜನಗಣತಿ ಉಸ್ತುವಾರಿ ಅಧಿಕಾರಿಗಳು ಹಾಗೂ ಮೇಲ್ವಿಚಾರಕರು ಕ್ಷೇತ್ರಮಟ್ಟದಲ್ಲಿ ನಿರಂತರ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು.

ನಂತರ ಜನಗಣತಿ-2027ರ ಎರಡನೇ ಹಂತದ ಜಿಲ್ಲಾ ನೋಡಲ್ ಅಧಿಕಾರಿ ಸತ್ಯೇಂದ್ರಕುಮಾರ್ ಅವರು ಜನಗಣತಿ ಕಾರ್ಯದಲ್ಲಿ ತೊಡಗಿಸಿಕೊಳ್ಳಲಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ತರಬೇತಿ ನೀಡಿದರು.

ಈ ಸಂದರ್ಭದಲ್ಲಿ ಬೀದರ್ ಸಹಾಯಕ ಆಯುಕ್ತ ಅಭಿನವ್ ಜೈನ್, ಬಸವಕಲ್ಯಾಣ ಸಹಾಯಕ ಆಯುಕ್ತ ಪ್ರಕಾಶ್ ಕುದರೆ, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಸೂರ್ಯಕಾಂತ್ ಬಿರಾದಾರ್ ಹಾಗೂ ಜಿ.ಪಂ. ಸಿಪಿಒ ಕಿಶೋರಕುಮಾರ್ ದುಬೆ ಸೇರಿದಂತೆ ಜನಗಣತಿ ಕಾರ್ಯದಲ್ಲಿ ಪಾಲ್ಗೊಳ್ಳಲಿರುವ ಇತರ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಸ್ವಸಹಾಯ ಸಂಘದ ಮಹಿಳೆಯರ ಉತ್ಪನ್ನ ಖರೀದಿಸಿ ಪ್ರೋತ್ಸಾಹಿಸಿ: ಕಿರಣ್ ಪಾಟೀಲ್



ಔರಾದ್:

ಸ್ವಸಹಾಯ ಸಂಘದ ಮಹಿಳೆಯರು ಸ್ವಾವಲಂಬಿಗಳಾಗಿ ಆರ್ಥಿಕವಾಗಿ ಸದೃಢರಾಗಲು ಸಾರ್ವಜನಿಕರು ಅವರು ತಯಾರಿಸಿದ ಉತ್ಪನ್ನಗಳನ್ನು ಖರೀದಿಸುವ ಮೂಲಕ ಪ್ರೋತ್ಸಾಹಿಸಬೇಕು ಎಂದು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಕಿರಣ್ ಪಾಟೀಲ್ ಹೇಳಿದರು.

ಪಟ್ಟಣದಲ್ಲಿ ಶುಕ್ರವಾರ ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಸಹಯೋಗದಲ್ಲಿ ಎನ್‌ಆರ್‌ಎಲ್‌ಎಂ ಯೋಜನೆಯಡಿ ಸ್ವಸಹಾಯ ಸಂಘದ ಮಹಿಳೆಯರು ತಯಾರಿಸಿದ ಮಣ್ಣಿನ ಹಣತೆಗಳು ಹಾಗೂ ವಿವಿಧ ಕರಕುಶಲ ಉತ್ಪನ್ನಗಳ ಮಾರಾಟ ಮಳಿಗೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಸಹಾಯ ಸಂಘದ ಮಹಿಳೆಯರು ತಮ್ಮ ಸ್ವಂತ ಪರಿಶ್ರಮದಿಂದ ವಿವಿಧ ಬಗೆಯ ಉತ್ಪನ್ನಗಳನ್ನು ತಯಾರಿಸಿ ಸ್ವಾವಲಂಬನೆಯತ್ತ ಹೆಜ್ಜೆ ಇಡುತ್ತಿರುವುದು ಸಂತಸದ ಸಂಗತಿಯಾಗಿದೆ. ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ತಯಾರಿಸಿರುವ ಮಣ್ಣಿನ ಹಣತೆಗಳು, ಚೆಂಡು ಹೂವುಗಳು, ಪೇಪರ್ ಪ್ಲೇಟ್‌ಗಳು, ಚಿಕ್ಕಿ, ಬಾಗಿಲು ಪರದೆ, ಪಾಪಡ ಹಾಗೂ ವಿವಿಧ ಗೃಹ ಅಲಂಕಾರಿಕ ವಸ್ತುಗಳು ಮಾರಾಟಕ್ಕೆ ಲಭ್ಯವಿವೆ. ಸಾರ್ವಜನಿಕರು ಮಾರುಕಟ್ಟೆಯಲ್ಲಿ ದೊರೆಯುವ ವಸ್ತುಗಳ ಜೊತೆಗೆ ಸ್ಥಳೀಯ ಸ್ವಸಹಾಯ ಸಂಘದ ಮಹಿಳೆಯರು ತಯಾರಿಸಿದ ಉತ್ಪನ್ನಗಳನ್ನೂ ಖರೀದಿಸಬೇಕು. ಇದರಿಂದ ಮಹಿಳೆಯರ ಆದಾಯ ಹೆಚ್ಚುವುದರ ಜೊತೆಗೆ ಅವರ ಉದ್ಯಮಶೀಲತೆಗೂ ಉತ್ತೇಜನ ದೊರೆಯಲಿದೆ ಎಂದರು.

ತಾಲೂಕು ಪಂಚಾಯತ್ ಸಹಾಯಕ ನಿರ್ದೇಶಕ ಶಿವಕುಮಾರ್ ಘಾಟೆ ಮಾತನಾಡಿ, ಎನ್‌ಆರ್‌ಎಲ್‌ಎಂ ಯೋಜನೆಯು ಗ್ರಾಮೀಣ ಮಹಿಳೆಯರಿಗೆ ಸ್ವಉದ್ಯೋಗ ಹಾಗೂ ಆರ್ಥಿಕ ಸ್ವಾವಲಂಬನೆ ಸಾಧಿಸಲು ಉತ್ತಮ ವೇದಿಕೆಯಾಗಿದೆ. ಮಹಿಳೆಯರು ತಮ್ಮಲ್ಲಿರುವ ಕೌಶಲ್ಯವನ್ನು ಬಳಸಿಕೊಂಡು ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆ ಸೌಲಭ್ಯ ಪಡೆದುಕೊಳ್ಳಬೇಕು. ಸಾರ್ವಜನಿಕರು ಸ್ಥಳೀಯ ಉತ್ಪನ್ನಗಳಿಗೆ ಆದ್ಯತೆ ನೀಡುವ ಮೂಲಕ ಮಹಿಳೆಯರ ಪರಿಶ್ರಮಕ್ಕೆ ಬೆಂಬಲ ನೀಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಪಂ ವ್ಯವಸ್ಥಾಪಕ ಸಂಜುಕುಮಾರ್ ಗೊರನಾಳೆ, ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕ ರಾಜಕುಮಾರ್ ಗೋರ್ಟೆ, ಶರಣಬಸಪ್ಪ ಸಾವಳೆ, ಕಾರ್ಯದರ್ಶಿ ಶರಣಪ್ಪ ನಾಗಲಗಿದ್ದೆ, ಜಾಧವ್ ಸುಲೋಚನ, ಭೀಮಾಂಜಲಿ, ಅಕ್ಷತಾ ಹಾಗೂ ರಾಜ್ಯಶ್ರೀ ಸೇರಿದಂತೆ ಸ್ವಸಹಾಯ ಸಂಘದ ಮಹಿಳೆಯರು ಮತ್ತು ಇತರರು ಹಾಜರಿದ್ದರು.

ಜಿಲ್ಲಾ ಮಟ್ಟದ ಜಾನಪದ ನೃತ್ಯ, ಪಾತ್ರಾಭಿನಯ ಸ್ಪರ್ಧೆ ಯಶಸ್ವಿ



ಕಲಬುರಗಿ:

ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಅರಿವು, ವೈಜ್ಞಾನಿಕ ಮನೋಭಾವ, ಸೃಜನಶೀಲತೆ ಹಾಗೂ ಜೀವನ ಕೌಶಲಗಳನ್ನು ಬೆಳೆಸುವ ಉದ್ದೇಶದಿಂದ ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಕಲಬುರಗಿ ಇವರ ಜಂಟಿ ಆಶ್ರಯದಲ್ಲಿ 202627ನೇ ಸಾಲಿನ ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಯೋಜನೆ (ಎನ್‌ಪಿಇಪಿ) ಅಡಿಯಲ್ಲಿ ಜಿಲ್ಲಾ ಮಟ್ಟದ ಜಾನಪದ ನೃತ್ಯ ಮತ್ತು ಪಾತ್ರಾಭಿನಯ ಸ್ಪರ್ಧೆಗಳನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸರ್ಕಾರಿ ಶಿಕ್ಷಕಿಯರ ಕಾಲೇಜಿನ (ಟಿ.ಟಿ.ಐ) ಪ್ರಾಚಾರ್ಯರಾದ ವಿಜಯಲಕ್ಷ್ಮಿ ವಹಿಸಿದ್ದರು. ವೇದಿಕೆಯಲ್ಲಿ ಕಾರ್ಯಕ್ರಮದ ಸಂಯೋಜಕ ಚಂದ್ರಕಾಂತ ಕೊಣ್ಣೂರ ಹಾಗೂ ಉಪನ್ಯಾಸಕ ಮಹಿಬೂಬ್ ಐಸಾಕಿ ಉಪಸ್ಥಿತರಿದ್ದರು. ಉಪನ್ಯಾಸಕರಾದ ಮೀರಾ ಪಟೇಲ್ ಮತ್ತು ಪಂಚಶೀಲಾ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಉಪನ್ಯಾಸಕ ಮಲಕಣ್ಣ ಹಚ್ಚಡದ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದ ಸಂಯೋಜಕ ಚಂದ್ರಕಾಂತ ಕೊಣ್ಣೂರ ಮಾತನಾಡಿ, ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಸ್ಪರ್ಧೆಗಳ ಸ್ವರೂಪ, ನಿಯಮಾವಳಿಗಳು, ಮೌಲ್ಯಮಾಪನದ ಮಾನದಂಡಗಳು ಹಾಗೂ ಅವುಗಳನ್ನು ಪಾಲಿಸುವ ಮಹತ್ವದ ಕುರಿತು ಸಮಗ್ರ ಮಾಹಿತಿ ನೀಡಿದರು. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಮನೋಭಾವದ ಜೊತೆಗೆ ಶಿಸ್ತು, ಸೃಜನಶೀಲತೆ ಮತ್ತು ತಂಡದ ಸಹಕಾರದ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಮುಖ್ಯ ಅತಿಥಿ ಮೀರಾ ಪಟೇಲ್ ಮಾತನಾಡಿ, ಪ್ರಸ್ತುತ ಸಮಾಜದಲ್ಲಿ ಜನಸಂಖ್ಯಾ ಶಿಕ್ಷಣದ ಮಹತ್ವ ಮತ್ತು ಅದರ ಅನಿವಾರ್ಯತೆಯನ್ನು ವಿವರಿಸಿದರು. ಜನಸಂಖ್ಯಾ ಬೆಳವಣಿಗೆ, ಆರೋಗ್ಯ, ಪರಿಸರ, ಕುಟುಂಬ ಜೀವನ, ಲಿಂಗ ಸಮಾನತೆ ಹಾಗೂ ಸಾಮಾಜಿಕ ಜವಾಬ್ದಾರಿಯಂತಹ ವಿಷಯಗಳ ಕುರಿತು ವಿದ್ಯಾರ್ಥಿಗಳಲ್ಲಿ ಸೂಕ್ತ ಅರಿವು ಮೂಡಿಸುವುದು ಇಂದಿನ ಅಗತ್ಯವಾಗಿದೆ. ಇಂತಹ ಶೈಕ್ಷಣಿಕ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಜೀವನದ ವಾಸ್ತವಿಕ ಸವಾಲುಗಳನ್ನು ಅರ್ಥಮಾಡಿಕೊಳ್ಳುವ ಹಾಗೂ ಜವಾಬ್ದಾರಿಯುತ ನಾಗರಿಕರಾಗಿ ರೂಪುಗೊಳ್ಳುವ ಸಾಮರ್ಥ್ಯವನ್ನು ಬೆಳೆಸುತ್ತವೆ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷೀಯ ಭಾಷಣ ಮಾಡಿದ ಸರ್ಕಾರಿ ಶಿಕ್ಷಕಿಯರ ಕಾಲೇಜಿನ ಪ್ರಾಚಾರ್ಯೆ ವಿಜಯಲಕ್ಷ್ಮಿ ಅವರು, ಸ್ಪರ್ಧೆಗಳ ಮೌಲ್ಯಮಾಪನ ಸಂಪೂರ್ಣ ನಿಷ್ಪಕ್ಷಪಾತ, ಪಾರದರ್ಶಕ ಹಾಗೂ ನ್ಯಾಯಸಮ್ಮತವಾಗಿರಬೇಕು. ಸ್ಪರ್ಧೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬ ವಿದ್ಯಾರ್ಥಿಯ ಪ್ರತಿಭೆಗೂ ಸೂಕ್ತ ಗೌರವ ಮತ್ತು ಪ್ರೋತ್ಸಾಹ ದೊರೆಯಬೇಕು. ವಿಜೇತರ ಆಯ್ಕೆಯಲ್ಲಿ ಯಾವುದೇ ಪೂರ್ವಾಗ್ರಹಗಳಿಗೆ ಅವಕಾಶ ನೀಡದೆ ನ್ಯಾಯಯುತ ತೀರ್ಪು ನೀಡುವುದು ಅತ್ಯಂತ ಮುಖ್ಯ ಎಂದರು.

ಜಿಲ್ಲಾ ಮಟ್ಟದಲ್ಲಿ ವಿಜೇತರಾಗುವ ವಿದ್ಯಾರ್ಥಿಗಳು ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿಯೂ ಅತ್ಯುತ್ತಮ ಪ್ರದರ್ಶನ ನೀಡಿ, ರಾಷ್ಟ್ರ ಮಟ್ಟದವರೆಗೂ ಮುನ್ನಡೆಯುವ ಮೂಲಕ ಕಲಬುರಗಿ ಜಿಲ್ಲೆಗೆ ಕೀರ್ತಿ ತರಲಿ ಎಂದು ಹಾರೈಸಿದರು. ಇಂತಹ ಸ್ಪರ್ಧೆಗಳು ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಯನ್ನು ಗುರುತಿಸಿ, ಬೆಳೆಸಲು ಉತ್ತಮ ವೇದಿಕೆಯಾಗಿವೆ ಎಂದು ತಿಳಿಸಿ, ಎಲ್ಲ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಜಿಲ್ಲೆಯ ವಿವಿಧ ಶಾಲೆಗಳಿಂದ ಆಗಮಿಸಿದ್ದ ನೂರಾರು ವಿದ್ಯಾರ್ಥಿಗಳು ಜಾನಪದ ನೃತ್ಯ ಮತ್ತು ಪಾತ್ರಾಭಿನಯ ಸ್ಪರ್ಧೆಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡು ತಮ್ಮ ಕಲಾತ್ಮಕ ಪ್ರತಿಭೆ, ಅಭಿವ್ಯಕ್ತಿ ಸಾಮರ್ಥ್ಯ ಹಾಗೂ ಸೃಜನಶೀಲತೆಯನ್ನು ಅನಾವರಣಗೊಳಿಸಿದರು. ಜಾನಪದ ಕಲೆಯ ಮೂಲಕ ಸಾಮಾಜಿಕ ಸಂದೇಶಗಳನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಿದರೆ, ಪಾತ್ರಾಭಿನಯದ ಮೂಲಕ ವಿವಿಧ ಸಾಮಾಜಿಕ ವಿಷಯಗಳನ್ನು ಮನಮುಟ್ಟುವಂತೆ ಅಭಿವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲೆಯ ಶಿಕ್ಷಣ ತಜ್ಞರು, ವಿವಿಧ ಶಾಲೆಗಳ ಶಿಕ್ಷಕರು, ಸರ್ಕಾರಿ ಶಿಕ್ಷಕಿಯರ ಕಾಲೇಜಿನ ಪ್ರಶಿಕ್ಷಣಾರ್ಥಿಗಳು ಹಾಗೂ ಶಿಕ್ಷಣ ಇಲಾಖೆಯ ಪ್ರತಿನಿಧಿಗಳು ಉಪಸ್ಥಿತರಿದ್ದು, ಸ್ಪರ್ಧಾರ್ಥಿಗಳಿಗೆ ಪ್ರೋತ್ಸಾಹ ನೀಡಿದರು.

ರೊಬೋಟಿಕ್ ತಂತ್ರಜ್ಞಾನದಿಂದ ಕೀಲು ಬದಲಾವಣೆ ಶಸ್ತ್ರಚಿಕಿತ್ಸೆ ಹೆಚ್ಚು ನಿಖರ: ಡಾ.ವಿನಯಕುಮಾರ್ ಹಂಪಣ್ಣ



ಬೀದರ್

ವೈದ್ಯಕೀಯ ಕ್ಷೇತ್ರದಲ್ಲಿ ಆಧುನಿಕ ರೊಬೋಟಿಕ್ ತಂತ್ರಜ್ಞಾನದ ಬಳಕೆಯಿಂದ ಕೀಲು ಬದಲಾವಣೆ ಶಸ್ತ್ರಚಿಕಿತ್ಸೆಯನ್ನು ಹೆಚ್ಚು ನಿಖರವಾಗಿ ನಡೆಸಲು ಸಾಧ್ಯವಾಗಿದ್ದು, ರೋಗಿಗಳು ಶೀಘ್ರ ಚೇತರಿಸಿಕೊಳ್ಳಲು ನೆರವಾಗುತ್ತಿದೆ ಎಂದು ಸಿಕಂದರಾಬಾದ್‌ನ ಯಶೋದಾ ಆಸ್ಪತ್ರೆಯ ಹಿರಿಯ ಮೂಳೆ ಶಸ್ತ್ರಚಿಕಿತ್ಸಾ ತಜ್ಞ ಡಾ. ವಿನಯಕುಮಾರ್ ಹಂಪಣ್ಣ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊಣಕಾಲು, ಸೊಂಟ ಹಾಗೂ ಭುಜದ ಕೀಲುಗಳ ಸವೆತ ಮತ್ತು ಇತರ ಸಮಸ್ಯೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಆಧುನಿಕ ತಂತ್ರಜ್ಞಾನದ ಮೂಲಕ ಪರಿಣಾಮಕಾರಿ ಚಿಕಿತ್ಸೆ ನೀಡಲಾಗುತ್ತಿದೆ. ರೊಬೋಟಿಕ್ ನೆರವಿನ ಶಸ್ತ್ರಚಿಕಿತ್ಸೆಯಲ್ಲಿ ರೋಗಿಯ ಮೂಳೆಯ ರಚನೆ ಹಾಗೂ ಅಳತೆಗೆ ಅನುಗುಣವಾಗಿ ಕೃತಕ ಕೀಲನ್ನು ನಿಖರವಾಗಿ ಅಳವಡಿಸಲು ಸಾಧ್ಯವಾಗುತ್ತದೆ ಎಂದರು.

ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಗೆ ಹೋಲಿಸಿದರೆ ರೊಬೋಟಿಕ್ ತಂತ್ರಜ್ಞಾನವು ಶಸ್ತ್ರಚಿಕಿತ್ಸೆಯ ನಿಖರತೆಯನ್ನು ಹೆಚ್ಚಿಸುತ್ತದೆ. ಶಸ್ತ್ರಚಿಕಿತ್ಸೆಯ ನಂತರದ ನೋವು ಕಡಿಮೆಯಾಗಲು ಹಾಗೂ ರೋಗಿಗಳು ಬೇಗನೆ ಚೇತರಿಸಿಕೊಳ್ಳಲು ಇದು ನೆರವಾಗಬಹುದು. ಇದರಿಂದ ರೋಗಿಗಳು ಮೆಟ್ಟಿಲು ಹತ್ತುವುದು, ನಡೆಯುವುದು ಸೇರಿದಂತೆ ತಮ್ಮ ದೈನಂದಿನ ಚಟುವಟಿಕೆಗಳಿಗೆ ಶೀಘ್ರವಾಗಿ ಮರಳಲು ಅನುಕೂಲವಾಗುತ್ತದೆ ಎಂದು ವಿವರಿಸಿದರು.

ಬೀದರ್ ಜಿಲ್ಲೆಯ ರೋಗಿಗಳಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಯಶೋದಾ ಆಸ್ಪತ್ರೆಯ ತಜ್ಞ ವೈದ್ಯರು ಸ್ಥಳೀಯ ವೈದ್ಯರ ಸಹಯೋಗದೊಂದಿಗೆ ಪ್ರತಿ ತಿಂಗಳು ನಗರಕ್ಕೆ ಭೇಟಿ ನೀಡಿ ತಪಾಸಣೆ ನಡೆಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಬೀದರ್‌ನಲ್ಲಿ ಯಶೋದಾ ಆಸ್ಪತ್ರೆಯ ಹೊರ ರೋಗಿ ಚಿಕಿತ್ಸಾ ಕೇಂದ್ರ (ಔಟ್‌ರೀಚ್ ಕ್ಲಿನಿಕ್) ಆರಂಭಿಸುವ ಯೋಜನೆಯಿದೆ. ಈ ಕೇಂದ್ರ ಆರಂಭವಾದರೆ ಜಿಲ್ಲೆಯ ರೋಗಿಗಳು ತಜ್ಞ ವೈದ್ಯರ ಸಲಹೆ ಹಾಗೂ ಪ್ರಾಥಮಿಕ ತಪಾಸಣೆಗಾಗಿ ಹೈದರಾಬಾದ್‌ಗೆ ತೆರಳುವ ಅಗತ್ಯ ಕಡಿಮೆಯಾಗಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಯಶೋದಾ ಆಸ್ಪತ್ರೆಯ ಉಪ ವ್ಯವಸ್ಥಾಪಕ ಸಿ.ಎಚ್. ಸತೀಶ್ ಹಾಗೂ ಬಿ. ಶ್ರೀನಿವಾಸ್ ಉಪಸ್ಥಿತರಿದ್ದರು.



ಬಸ್ ಪ್ರಯಾಣ ದರ ಏರಿಕೆ ಹಿಂಪಡೆಯಲು ಕರವೇ ಆಗ್ರಹ

ಬೀದರ್

ರಾಜ್ಯ ಸರ್ಕಾರ ಬಸ್ ಪ್ರಯಾಣ ದರ ಹೆಚ್ಚಿಸಿರುವುದರಿಂದ ಸಾಮಾನ್ಯ ಜನರು, ಕೂಲಿ ಕಾರ್ಮಿಕರು, ರೈತರು ಹಾಗೂ ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯಾಗುತ್ತಿದೆ. ಆದ್ದರಿಂದ ಹೆಚ್ಚಿಸಿರುವ ಬಸ್ ಪ್ರಯಾಣ ದರವನ್ನು ಕೂಡಲೇ ಹಿಂಪಡೆಯಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಜಿಲ್ಲಾ ಘಟಕ ಆಗ್ರಹಿಸಿದೆ.

ನಗರದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಮೂಲಕ ಮುಖ್ಯಮಂತ್ರಿಗಳಿಗೆ ಶುಕ್ರವಾರ ಮನವಿ ಸಲ್ಲಿಸಿದ ಸಂಘಟನೆಯ ಪದಾಧಿಕಾರಿಗಳು, ರಾಜ್ಯದಲ್ಲಿ ಉದ್ಯೋಗಾವಕಾಶಗಳ ಕೊರತೆ, ಕುಟುಂಬ ನಿರ್ವಹಣೆ, ಮಕ್ಕಳ ಶಿಕ್ಷಣ ಸೇರಿದಂತೆ ದಿನನಿತ್ಯದ ಖರ್ಚುಗಳನ್ನು ನಿಭಾಯಿಸಲು ಜನರು ಪರದಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಮಳೆ ಪ್ರಮಾಣ ಕಡಿಮೆಯಾಗಿ ಬರ ಪರಿಸ್ಥಿತಿ ಉಂಟಾಗಿರುವುದರಿಂದ ರೈತರು ಹಾಗೂ ಗ್ರಾಮೀಣ ಜನರು ಸಂಕಷ್ಟದಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರ ಬಸ್ ಪ್ರಯಾಣ ದರ ಹೆಚ್ಚಿಸಿರುವುದು ಜನಸಾಮಾನ್ಯರ ಮೇಲೆ ಮತ್ತಷ್ಟು ಆರ್ಥಿಕ ಹೊರೆ ಹೊರಿಸಿದಂತಾಗಿದೆ. ದರ ಏರಿಕೆಯಿಂದ ಕೂಲಿ ಕಾರ್ಮಿಕರು, ರೈತರು, ಶಾಲಾ ಮಕ್ಕಳು ಹಾಗೂ ಕಾಲೇಜು ವಿದ್ಯಾರ್ಥಿಗಳು ಪ್ರತಿನಿತ್ಯ ಪ್ರಯಾಣಿಸಲು ಹೆಚ್ಚಿನ ಹಣ ವ್ಯಯಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಜನರ ಸಂಕಷ್ಟವನ್ನು ಪರಿಗಣಿಸಿ ಸರ್ಕಾರ ಕೂಡಲೇ ಹೆಚ್ಚಿಸಿರುವ ಬಸ್ ಪ್ರಯಾಣ ದರವನ್ನು ಹಿಂಪಡೆಯಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಮನವಿ ಸಲ್ಲಿಸಿದ 15 ದಿನಗಳೊಳಗೆ ದರ ಏರಿಕೆಯನ್ನು ಹಿಂಪಡೆಯದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು ಎಂದು ಸಂಘಟನೆಯ ಪದಾಧಿಕಾರಿಗಳು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಕರವೇ ಜಿಲ್ಲಾಧ್ಯಕ್ಷ ಪೀಟರ್ ಚಿಟಗುಪ್ಪಾ, ಸಂಚಾಲಕ ಬಸವರಾಜ್ ನಂದಗಾಂವ್, ರೈತ ಘಟಕದ ಅಧ್ಯಕ್ಷ ವೀರಶೆಟ್ಟಿ ಗೊಸಪುರ್ ರೈತ ಘಟಕದ ಮುಖಂಡ ಧನರಾಜ್ ಗೊಸಪುರ್ ಜಿಲ್ಲಾ ಕಾರ್ಯದರ್ಶಿ ಮೊಜೆಸ್ ಆಣದೂರ್ ಜಿಲ್ಲಾ ಸಹಕಾರ್ಯದರ್ಶಿಗಳಾದ ಮೈಕಲ್ ಕಡ್ಯಾಳ್ ಹಾಗೂ ಅಶೋಕ್ ಕಡ್ಯಾಳ್,

ವಿದ್ಯಾರ್ಥಿ ಘಟಕದ ಅಧ್ಯಕ್ಷ ನಾಗೇಶ್ ರಾಯಣ್ಣೋರ್ ಯುವ ಘಟಕದ ಅಧ್ಯಕ್ಷ ಚಂದ್ರಕಾಂತ್ ಪೋಳ್, ನಿಲೇಶ್ ರಾಠೋಡ, ಧನರಾಜ್ ಚಿಟ್ಟಾವಾಡಿ, ಶಿವಕುಮಾರ್ ಮಾಮುಡಗಿ, ಸಹ ಕಾರ್ಯದರ್ಶಿ ರಾಜಗೊಂಡ್ ಆಣದೂರೆ, ಅಭಿಷೇಕ್ ಕಮಠಾಣಾ, ಆಕಾಶ್ ಕಡ್ಯಾಳ್ ಹಾಗೂ ಶಾದ್ರಾಕ್ ನೆಲ್ಗಿ ಸೇರಿದಂತೆ ಕರವೇ ಕಾರ್ಯಕರ್ತರು ಉಪಸ್ಥಿತರಿದ್ದರು.

ಹಿಂಗಾರು, ಬೇಸಿಗೆ ಬೆಳೆಗಳಿಗೆ ಫಸಲ್ ಭಿಮಾ ಯೋಜನೆಯಡಿ ವಿಮೆ ನೋಂದಣಿಗೆ ಅವಕಾಶ



ಕಲಬುರಗಿ:

2026-27ನೇ ಸಾಲಿನ ಹಿಂಗಾರು ಹಾಗೂ ಬೇಸಿಗೆ ಹಂಗಾಮಿನಲ್ಲಿ ಬೆಳೆಯುವ ಕಡಲೆ, ಜೋಳ, ಗೋಧಿ, ಕುಸುಬೆ, ಭತ್ತ ಹಾಗೂ ನೆಲಗಡಲೆ (ಶೇಂಗಾ) ಬೆಳೆಗಳಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿ ಬೆಳೆ ವಿಮೆ ಮಾಡಿಸಲು ರೈತರು ತಮ್ಮ ಹತ್ತಿರದ ಬ್ಯಾಂಕ್‌ಗಳು, ಗ್ರಾಮ್ ಒನ್ ಅಥವಾ ಸಿಎಸ್‌ಸಿ ಕೇಂದ್ರಗಳಿಗೆ ತೆರಳಿ ನೋಂದಣಿ ಮಾಡಿಕೊಳ್ಳಬೇಕು ಎಂದು ಕಲಬುರಗಿ ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ತಿಳಿಸಿದ್ದಾರೆ.

ಕಲಬುರಗಿ ಜಿಲ್ಲೆಯಲ್ಲಿ ಹಿಂಗಾರು ಹಂಗಾಮಿನ ಬಿತ್ತನೆ ಕಾರ್ಯ ಭರದಿಂದ ಸಾಗಿದ್ದು, ಬಿತ್ತನೆ ಪೂರ್ವದಿಂದ ಕೊಯ್ಲಿನ ನಂತರದವರೆಗೆ ಸಂಭವಿಸಬಹುದಾದ ಅನಿರೀಕ್ಷಿತ ನೈಸರ್ಗಿಕ ವಿಕೋಪಗಳಿಂದ ಬೆಳೆ ನಷ್ಟವಾಗುವ ಸಾಧ್ಯತೆಯಿದೆ. ಅತಿವೃಷ್ಟಿ, ಅನಾವೃಷ್ಟಿ ಹಾಗೂ ಅಕಾಲಿಕ ಮಳೆಯಂತಹ ಪ್ರಕೃತಿ ವಿಕೋಪಗಳಿಂದ ಯಾವುದೇ ಹಂತದಲ್ಲೂ ಬೆಳೆ ನಾಶವಾಗಬಹುದು. ಇಂತಹ ಸಂದರ್ಭದಲ್ಲಿ ರೈತರನ್ನು ಬೆಳೆ ನಷ್ಟದಿಂದ ರಕ್ಷಿಸುವ ಉದ್ದೇಶದಿಂದ ಯೋಜನೆ ಜಾರಿಗೊಳಿಸಲಾಗಿದೆ. ಆದ್ದರಿಂದ ರೈತರು ಬಿತ್ತನೆ ಕಾರ್ಯ ಕೈಗೊಳ್ಳುವುದರ ಜೊತೆಗೆ ಬಿತ್ತನೆ ಮಾಡಿದ ಬೆಳೆಯ ಕ್ಷೇತ್ರವನ್ನು ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿ ನೋಂದಾಯಿಸುವುದು ಕೂಡ ಮುಖ್ಯವಾಗಿದೆ ಎಂದು ಅವರು ತಿಳಿಸಿದ್ದಾರೆ.

ಹಿಂಗಾರು ಹಾಗೂ ಬೇಸಿಗೆ ಹಂಗಾಮಿನ ಬೆಳೆ ವಿಮೆಗಾಗಿ ರೈತರು ಪಾವತಿಸಬೇಕಾದ ವಂತಿಕೆ ಮತ್ತು ನೋಂದಣಿಗೆ ನಿಗದಿಪಡಿಸಿರುವ ಕೊನೆಯ ದಿನಾಂಕದ ವಿವರ ಹೀಗಿದೆ:

ಕಡಲೆ (ಮಳೆಯಾಶ್ರಿತ) ಹಿಂಗಾರು ಬೆಳೆಗೆ ಪ್ರತಿ ಹೆಕ್ಟೇರ್‌ಗೆ 693 ರೂ. ವಂತಿಕೆ ಪಾವತಿಸಬೇಕು. ನೋಂದಣಿಗೆ ಡಿಸೆಂಬರ್ 15 ಕೊನೆಯ ದಿನವಾಗಿದೆ. ಕಡಲೆ (ನೀರಾವರಿ) ಹಿಂಗಾರು ಬೆಳೆಗೆ ಪ್ರತಿ ಹೆಕ್ಟೇರ್‌ಗೆ 625.50 ರೂ. ವಂತಿಕೆ ಪಾವತಿಸಬೇಕು.

ಜೋಳ (ಮಳೆಯಾಶ್ರಿತ) ಹಿಂಗಾರು ಬೆಳೆಗೆ ಪ್ರತಿ ಹೆಕ್ಟೇರ್‌ಗೆ 789 ರೂ. ಹಾಗೂ ಜೋಳ (ನೀರಾವರಿ) ಹಿಂಗಾರು ಬೆಳೆಗೆ ಪ್ರತಿ ಹೆಕ್ಟೇರ್‌ಗೆ 666 ರೂ. ವಂತಿಕೆ ಪಾವತಿಸಬೇಕು. ಈ ಎರಡೂ ಬೆಳೆಗಳ ವಿಮೆ ನೋಂದಣಿಗೆ ನವೆಂಬರ್ 30 ಕೊನೆಯ ದಿನವಾಗಿದೆ.

ಭತ್ತ (ನೀರಾವರಿ) ಹಿಂಗಾರು ಬೆಳೆಗೆ ಪ್ರತಿ ಹೆಕ್ಟೇರ್‌ಗೆ 1,629 ರೂ. ವಂತಿಕೆ ಪಾವತಿಸಬೇಕು. ನೋಂದಣಿಗೆ ನವೆಂಬರ್ 16 ಕೊನೆಯ ದಿನವಾಗಿದೆ.


ಗೋಧಿ (ಮಳೆಯಾಶ್ರಿತ) ಹಿಂಗಾರು ಬೆಳೆಗೆ ಪ್ರತಿ ಹೆಕ್ಟೇರ್‌ಗೆ 829.50 ರೂ. ಹಾಗೂ ಗೋಧಿ (ನೀರಾವರಿ) ಹಿಂಗಾರು ಬೆಳೆಗೆ ಪ್ರತಿ ಹೆಕ್ಟೇರ್‌ಗೆ 550.50 ರೂ. ವಂತಿಕೆ ಪಾವತಿಸಬೇಕು. ಈ ಬೆಳೆಗಳ ವಿಮೆ ನೋಂದಣಿಗೆ ಡಿಸೆಂಬರ್ 31 ಕೊನೆಯ ದಿನವಾಗಿದೆ.

ಕುಸುಬೆ (ಮಳೆಯಾಶ್ರಿತ) ಹಿಂಗಾರು ಬೆಳೆಗೆ ಪ್ರತಿ ಹೆಕ್ಟೇರ್‌ಗೆ 513 ರೂ. ವಂತಿಕೆ ಪಾವತಿಸಬೇಕು. ನೋಂದಣಿಗೆ ನವೆಂಬರ್ 30 ಕೊನೆಯ ದಿನವಾಗಿದೆ.

ಭತ್ತ (ನೀರಾವರಿ) ಬೇಸಿಗೆ ಬೆಳೆಗೆ ಪ್ರತಿ ಹೆಕ್ಟೇರ್‌ಗೆ 1,629 ರೂ. ಹಾಗೂ ನೆಲಗಡಲೆ (ನೀರಾವರಿ) ಬೇಸಿಗೆ ಬೆಳೆಗೆ ಪ್ರತಿ ಹೆಕ್ಟೇರ್‌ಗೆ 1,629 ರೂ. ವಂತಿಕೆ ಪಾವತಿಸಬೇಕು. ಈ ಎರಡೂ ಬೆಳೆಗಳ ವಿಮೆ ನೋಂದಣಿಗೆ 2027ರ ಫೆಬ್ರವರಿ 26 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೈತರು ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರ, ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸುವಂತೆ ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಮನರೇಗಾ ಕಾರ್ಮಿಕರ ಬಾಕಿ ಕೂಲಿ ಪಾವತಿಗೆ 34.77 ಕೋಟಿ ರೂ. ಮಂಜೂರು : ಸಚಿವ ಈಶ್ವರ್ ಖಂಡ್ರೆ



ಬೀದರ್

ವಿಬಿ-ಜಿ ರಾಮ್ ಜಿ ಜಾರಿಯಾಗುವ ಮುನ್ನ ಜಾರಿಯಲ್ಲಿದ್ದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಮನರೇಗಾ) ಅಡಿಯಲ್ಲಿ ಕೆಲಸ ಮಾಡಿದ ಅಕುಶಲ ಕಾರ್ಮಿಕರಿಗೆ ಪಾವತಿಸಬೇಕಿದ್ದ ಬಾಕಿ ಕೂಲಿ ಹಣ ಬಿಡುಗಡೆ ಮಾಡಲು 34.77 ಕೋಟಿ ರೂ. ಮಂಜೂರಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ.

ಮನರೇಗಾ ಅಡಿಯಲ್ಲಿ ಕೆಲಸ ಮಾಡಿದ್ದ ಕಾರ್ಮಿಕರಿಗೆ ಬಾಕಿ ಇರುವ ಕೂಲಿ ಪಾವತಿಸಲು ಹಣ ಬಿಡುಗಡೆ ಮಾಡುವಂತೆ ತಾವು ಕೇಂದ್ರ, ಸರ್ಕಾರ ಹಾಗೂ ಕೇಂದ್ರ ಸಚಿವರಿಗೆ ಹಲವು ಬಾರಿ ಮನವಿ ಮಾಡಿ ಒತ್ತಾಯಿಸಿದ್ದೆ. ಇದೀಗ ಕೊನೆಯ ಕಂತಿನ ಕೂಲಿ ಪಾವತಿಗಾಗಿ ಒಟ್ಟು 34.77 ಕೋಟಿ ರೂ. ಹಣವನ್ನು ಕೇಂದ್ರ ಸರ್ಕಾರ ರಾಜ್ಯಕ್ಕೆ ಮಂಜೂರು ಮಾಡಿದೆ ಎಂದು ಅವರು ಹೇಳಿದ್ದಾರೆ.

ಈ ಒಟ್ಟು ಮೊತ್ತದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಕಾರ್ಮಿಕರ ಕೂಲಿ ಪಾವತಿಗೆ 6.87 ಕೋಟಿ ರೂ., ಪರಿಶಿಷ್ಟ ಪಂಗಡದ ಕಾರ್ಮಿಕರ ಕೂಲಿ ಪಾವತಿಗೆ 5.75 ಕೋಟಿ ರೂ. ಹಾಗೂ ಇತರ ವರ್ಗಗಳ ಕಾರ್ಮಿಕರಿಗೆ 22.15 ಕೋಟಿ ರೂ. ಹಂಚಿಕೆ ಮಾಡಲಾಗಿದೆ ಎಂದು ವಿವರಿಸಿದ್ದಾರೆ.

ಈ ಅನುದಾನವು ಕಾರ್ಮಿಕರ ಬಾಕಿ ವೇತನ ಪಾವತಿಗೆ ನೆರವಾಗಲಿದ್ದು, ನಿಧಿ ವರ್ಗಾವಣೆ ಆದೇಶದ ಆಧಾರದ ಮೇಲೆ ನೇರವಾಗಿ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ಹಣ ಜಮಾ ಮಾಡಲಾಗುವುದು ಎಂದು ಅವರು ತಿಳಿಸಿದ್ದಾರೆ.

ಇದೇ ವೇಳೆ, ಮನರೇಗಾ ಅಡಿಯಲ್ಲಿ ಗ್ರಾಮಗಳಲ್ಲಿ ಆಸ್ತಿ ಸೃಜನೆಗಾಗಿ ಕೈಗೊಂಡಿರುವ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದಂತೆ 1,570 ಕೋಟಿ ರೂ. ಸಾಮಗ್ರಿ ವೆಚ್ಚ ಬಾಕಿ ಇದೆ. ಈ ಹಣವನ್ನೂ ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ಈಶ್ವರ್ ಖಂಡ್ರೆ ತಿಳಿಸಿದ್ದಾರೆ.

ಒಂದನೇಯ ಪುಟದಿಂದ

ಮೋದಿ ಸರ್ಕಾರದ ಅಡಿ ಭಾರತದ ರಚನೆಗೆ ಹಾನಿ; ಸೋನಿಯಾ ಗಾಂಧಿ ಗಂಭೀರ ಆರೋಪ

ಪ್ರತಿ ಜಿಲ್ಲೆಯಲ್ಲಿ, ಕಾಂಗ್ರೆಸ್ ಪಕ್ಷ ನಮ್ಮ ಸಂವಿಧಾನದಲ್ಲಿ ಅಡಕವಾಗಿರುವ ಮೌಲ್ಯಗಳಿಗಾಗಿ ಇನ್ನೂ ಹೋರಾಡುತ್ತಿದ್ದಾರೆ

ಕಾಂಗ್ರೆಸ್ ಪಕ್ಷವು ಸಮಾನ ಮನಸ್ಕ ಪಕ್ಷಗಳೊಂದಿಗೆ ಕೆಲಸ ಮಾಡುತ್ತಿದೆ. ನಮ್ಮ ಭವಿಷ್ಯದ ಸಾಧ್ಯತೆಗಳು ದಿನದಿಂದ ದಿನಕ್ಕೆ ಉತ್ತಮಗೊಳ್ಳುತ್ತಿವೆ. ಕಾಂಗ್ರೆಸ್ ಪಕ್ಷದಲ್ಲಿ ಜನರು ರಾಜಕೀಯವಾಗಿ ಯಶಸ್ವಿಯಾಗಲು ಹಲವು ಮಾರ್ಗಗಳಿವೆ. ಆರ್‌ಎಸ್‌ಎಸ್‌ನಿಂದ ನಾವು ಕಲಿಯುವಂತಹದ್ದು ಇನ್ನೂ ಇದೆ ಎಂದು ನನಗೆ ಅನ್ನಿಸುವುದಿಲ್ಲ ಎಂದರು.

ಹಾರ್ಪರ್‌ಕಾಲಿನ್ಸ್ ಇಂಡಿಯಾ ಪ್ರಕಟಿಸಿರುವ 'ಬಿಲಾಂಗಿಂಗ್: ಎ ಜರ್ನಿ ಆಫ್ ಲವ್' ವೈಯಕ್ತಿಕ ಆತ್ಮಕಥನವಾಗಿದ್ದು, ರಾಜಕೀಯ ಒಂದು ರೀತಿ ಚೌಕಟ್ಟಾಗಿ ಕೆಲಸ ಮಾಡುತ್ತದೆ ಎಂದರು.

ತಮ್ಮ ಪುಸ್ತಕ ಬಿಡುಗಡೆ ಕುರಿತು ಕಳೆದ ತಿಂಗಳು ತಿಳಿಸಿದ್ದ ಅವರು, ದಶಕಗಳ ಕಾಲ ಹಲವರು ತಮ್ಮ ಬಗ್ಗೆ ಹೇಳುತ್ತಿದ್ದರು. ಆದರೆ, ಈಗ ನನ್ನ ಸರದಿ. ಕೆಲವು ಕೋಲಾಹಲದ ತಮಾಷೆಗಳನ್ನು ಮಾಡಲಿದ್ದಾರೆ ಎಂದರು ತಿಳಿಸಿದ್ದರು. ನವೆಂಬರ್ 10ರಂದು ಬಿಡುಗಡೆಯಾಗಲಿರುವ ಪುಸ್ತಕ 544 ಪುಟಗಳನ್ನು ಹೊಂದಿದೆ. ಈ ಹಿಂದೆ ಈ ಪುಸ್ತಕ ಪೆಂಗ್ವಿನ್ ರಾಂಡಮ್ ಹೌಸ್ ಇಂಡಿಯಾದಿಂದ ಪ್ರಕಟವಾಗಲಿದೆ ಎನ್ನಲಾಗಿತ್ತಾದರೂ ಬಳಿಕ ಸಂಸ್ಥೆ ಇದರಿಂದ ಹಿಂದೆ ಸರಿದಿದ್ದಾಗಿ ತಿಳಿಸಿತ್ತು.

ಬೆಲೆ ಏರಿಕೆ ಖಂಡಿಸಿ ಬಿಜೆಪಿ ಪ್ರತಿಭಟನೆ: ಭಿಕ್ಷಾಪಾತ್ರೆ ಹಿಡಿದು ಕಾಂಗ್ರೆಸ್ ಸರ್ಕಾರದ ವಿರುದ್ಧ ಆಕ್ರೋಶ

ರೂಪದಲ್ಲಿ ಹೊರೆ ಹಾಕುತ್ತಿರುವುದು ಸರಿಯಲ್ಲ. ರಾಜ್ಯ ಸರ್ಕಾರದ ಬೆಲೆ ಏರಿಕೆ ನೀತಿಯನ್ನು ಕೂಡಲೇ ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜನರು ಕಾಂಗ್ರೆಸ್ ಸರ್ಕಾರದ ಆಡಳಿತಕ್ಕೆ ತಕ್ಕ ಉತ್ತರ ನೀಡಲಿದ್ದಾರೆ ಎಂದು ಪ್ರತಿಭಟನಾಕಾರರು ಹೇಳಿದರು. ಕಾಂಗ್ರೆಸ್ ಸರ್ಕಾರ ತೊಲಗಬೇಕು ಎಂದು ಘೋಷಣೆ ಕೂಗಿದರು.

ಈ ವೇಳೆ ನಗರ ಶಾಸಕ ಡಾ. ಶಿವರಾಜ್ ಪಾಟೀಲ್, ಜಿಲ್ಲಾಧ್ಯಕ್ಷ ವೀರನ ಗೌಡ ಲೆಕ್ಕಿಹಾಳ, ಕಡಗೋಳ್ ಆಂಜನೇಯ, ರವೀಂದ್ರ ಜಲ್ದಾರ್,ಅಶ್ವಿನಿ,ರೂಪ ಶ್ರೀನಿವಾಸ್ ನಾಯಕ ,ಸಂತೋಷ ರಾಜಗೂರು, ಶಶಿರಾಜ್, ಶರಣಮ್ಮ ಕಾಮರೆಡ್ಡಿ ಸೇರಿದಂತೆ ಪಕ್ಷದ ಕಾರ್ಯಕರ್ತರು ಇದ್ದರು.

ಅಕ್ರಮ ಸಾಗೋಣಿ ಮರ ಸಾಗಾಟದ ಮೂರು ಪಿಕಪ್ ವಾಹನಗಳು ವಶಕ್ಕೆ!

ಈಗಾಗಲೇ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ವಶಪಡಿಸಿಕೊಂಡಿರುವ ಮೂರು ವಾಹನಗಳ ಹಿಂದೆಯೇ ದೊಡ್ಡ ಮಟ್ಟದ ಅಕ್ರಮ ಜಾಲ ಕಾರ್ಯನಿರ್ವಹಿಸುತ್ತಿದೆಯೇ ಎಂಬುದು ತನಿಖೆಯಿಂದ ತಿಳಿದುಬರಬೇಕಿದೆ. ಅಕ್ರಮವಾಗಿ ಬೆಲೆಬಾಳುವ ಮರಗಳನ್ನು ಸಾಗಾಟ ಮಾಡಿ ಕಾನೂನುಬಾಹಿರವಾಗಿ ಹಣ ಸಂಪಾದಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಈ ದಂಧೆಯ ಹಿಂದಿರುವ ಪ್ರಮುಖ ಆರೋಪಿಗಳನ್ನು ಪತ್ತೆಹಚ್ಚಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಲಿಂಗಸುಗೂರು ಪೊಲೀಸ್ ಇಲಾಖೆಯ ಈ ಕಾರ್ಯಾಚರಣೆಗೆ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.

ಸ್ವಾಮಿನಾಥನ್ ಆಯೋಗದ ಶಿಫಾರಸು ಜಾರಿಗೆ ಎರಡು ತಿಂಗಳ ಗಡುವು:ರೈತರ ಸಂಪೂರ್ಣ ಸಾಲ ಮನ್ನಾಕ್ಕೆ ಆಗ್ರಹ

ರೈತರ ಉತ್ಪನ್ನಗಳನ್ನು ಬೆಂಬಲ ಬೆಲೆಗಿಂತ ಕಡಿಮೆ ದರಕ್ಕೆ ಖರೀದಿಸುವ ವ್ಯಾಪಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವ ವ್ಯವಸ್ಥೆ ಜಾರಿಯಾಗಬೇಕು. ಮಾರುಕಟ್ಟೆಯಲ್ಲಿ ಬೆಲೆ ಕುಸಿತ ಉಂಟಾದಾಗ ಸರ್ಕಾರವೇ ನೇರವಾಗಿ ಖರೀದಿಗೆ ಮುಂದಾಗಬೇಕು. ವರ್ಷಪೂರ್ತಿ ಖರೀದಿ ಕೇಂದ್ರಗಳನ್ನು ಕಾರ್ಯನಿರ್ವಹಿಸುವಂತೆ ಮಾಡಿ, ಮಾರಾಟವಾದ ಉತ್ಪನ್ನಗಳ ಹಣವನ್ನು ಅದೇ ದಿನ ರೈತರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಬೇಕು ಎಂದು ಆಗ್ರಹಿಸಿದರು.ಸ್ವಾಮಿನಾಥನ್ ಆಯೋಗದ ಶಿಫಾರಸುಗಳು ಕಳೆದ ಎರಡು ದಶಕಗಳಿಂದ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಂಡಿಲ್ಲ. ಇದರಿಂದ ರೈತರಿಗೆ ನಿರಂತರ ಅನ್ಯಾಯವಾಗುತ್ತಿದೆ. ಕೃಷಿಕರ ಬದುಕಿನಲ್ಲಿ ಆರ್ಥಿಕ ಸ್ಥಿರತೆ ತರಲು ಅವರ ಮೇಲಿನ ಕೃಷಿ ಸಾಲಗಳನ್ನು ಸಂಪೂರ್ಣ ಮನ್ನಾ ಮಾಡಬೇಕು. ಸಾಲ ವಸೂಲಾತಿ ಹೆಸರಿನಲ್ಲಿ ಬ್ಯಾಂಕ್ ಸಿಬ್ಬಂದಿ ರೈತರ ಮನೆಗಳಿಗೆ ತೆರಳಿ ಕಿರುಕುಳ ನೀಡುವುದು ಹಾಗೂ ಟ್ರ್ಯಾಕ್ಟರ್ ಕೃಷಿ ಉಪಕರಣಗಳನ್ನು ಜಪ್ತಿ ಮಾಡುವುದನ್ನು ತಡೆಯಬೇಕು ಎಂದು ಹೇಳಿದರು.

ಬರಗಾಲ ಮತ್ತು ಜಲಕ್ಷಾಮದಿಂದ ಕೃಷಿ ಕ್ಷೇತ್ರದ ಚಟುವಟಿಕೆಗಳಿಗೆ ತೊಂದರೆಯಾಗುತ್ತಿದ್ದು, ನೀರಾವರಿ ಯೋಜನೆಗಳಿಗೆ ಹೆಚ್ಚಿನ ಅನುದಾನ ಒದಗಿಸಬೇಕು. ನದಿ ಜೋಡಣೆ ಯೋಜನೆಗಳ ಕುರಿತು ಪರಿಶೀಲನೆ ನಡೆಸುವುದರೊಂದಿಗೆ ಅರ್ಧಕ್ಕೆ ನಿಂತಿರುವ ಏತ ನೀರಾವರಿ ಕಾಮಗಾರಿಗಳನ್ನು ಪುನರಾರಂಭಿಸಿ ಕೃಷಿ ಭೂಮಿಗೆ ಸಮರ್ಪಕ ನೀರು ಒದಗಿಸಬೇಕು ಎಂದು ಮನವಿ ಮಾಡಿದರು.ಎಪಿಎಂಸಿ ಮಾರುಕಟ್ಟೆಗಳಲ್ಲಿ ತೂಕ ಹಾಗೂ ಗುಣಮಟ್ಟದ ನೆಪವೊಡ್ಡಿ ರೈತರ ಉತ್ಪನ್ನಗಳ ಹಣದಲ್ಲಿ ಕಡಿತ ಮಾಡುವುದನ್ನು ನಿಲ್ಲಿಸಬೇಕು. ಅದರಲ್ಲೂ 'ಸೂಟ್' ಹೆಸರಿನಲ್ಲಿ ಹಣ ವಸೂಲಿ ಮಾಡುವ ಪದ್ಧತಿಯನ್ನು ರದ್ದುಪಡಿಸಿ, ಇಂತಹ ಅಕ್ರಮಗಳಲ್ಲಿ ತೊಡಗುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಮಾರುಕಟ್ಟೆ ವಹಿವಾಟಿನಲ್ಲಿ ಪಾರದರ್ಶಕತೆ ಕಾಪಾಡಿ ರೈತರಿಗೆ ಅವರ ಉತ್ಪನ್ನದ ಪೂರ್ಣ ಮೊತ್ತ ಸಿಗುವಂತೆ ಮಾಡಬೇಕು ಎಂದು ಒತ್ತಾಯಿಸಿದರು.

ಇದರ ಜೊತೆಗೆ ಸರ್ಕಾರಿ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು, ಮದ್ಯ ಮಾರಾಟ ನಿಷೇಧಕ್ಕೆ ಕ್ರಮ ಕೈಗೊಳ್ಳಬೇಕು ಹಾಗೂ ರೈತ ವಿರೋಧಿ ಕೃಷಿ ಕಾಯ್ದೆ ಮತ್ತು ನೀತಿಗಳನ್ನು ಹಿಂಪಡೆಯಬೇಕು. ಕೃಷಿಕರ ಹಿತಾಸಕ್ತಿ ಕಾಪಾಡುವ ಶಾಶ್ವತ ಕಾನೂನುಗಳನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರ ಬೇಡಿಕೆಗಳನ್ನು ಕಡೆಗಣಿಸದೆ ಸ್ಪಂದಿಸಬೇಕು. ಎರಡು ತಿಂಗಳ ಗಡುವಿನೊಳಗೆ ಸ್ವಾಮಿನಾಥನ್ ಆಯೋಗದ ಶಿಫಾರಸುಗಳ ಅನುಷ್ಠಾನದ ಕುರಿತು ನಿರ್ಧಾರ ಕೈಗೊಳ್ಳದಿದ್ದರೆ ವಿವಿಧ ರಾಜ್ಯಗಳ ರೈತ ಸಂಘಟನೆಗಳನ್ನು ಒಗ್ಗೂಡಿಸಿ ದೇಶಾದ್ಯಂತ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ರಾಮಯ್ಯ ಜವಳಗೆರೆ, ನರಸಪ್ಪ ದೇವಸುಗೂರು, ವೆಂಕಟೇಶ, ಚೆನ್ನಪ್ಪ, ರಾಮಬಾಬು, ಚನ್ನಬಸಯ್ಯ, ನಾಗಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮುನ್ನೂರು ಕಾಪು ಸಮಾಜದಿಂದ ವೀರಹನುಮಾನ, ಹೇಮರೆಡ್ಡಿ ಎನ್‌ರಿಗೆ ಅದ್ದೂರಿ ಸನ್ಮಾನ ಸಮಾರಂಭ

ವೀರ ಹನುಮಾನ್ ಅವರು ಹೃದಯಶೀಲವಂತರು, ವಿಚಾರವಂತರು ಹಾಗೂ ಅತ್ಯಂತ ಸರಳ ವ್ಯಕ್ತಿತ್ವ ಹೊಂದಿದ್ದಾರೆ. ವೀರಹನುಮಾನ್ ಅವರು ಎಲ್ಲಾ ಸಮುದಾಯದ ಜೊತೆಗೆ ಉತ್ತಮ ಒಡನಾಟ ಹೊಂದಿದ್ದಾರೆ.

ವೀರ ಹನುಮಾನ್ ಅವರು ಎಂದು ರಾಜ್ಯೋತ್ಸವದ ಪ್ರಶಸ್ತಿಗೆ ಶಿಫಾರಸ್ಸು ಮಾಡುವಂತೆ ಯಾರ ಬಳಿ ಅವರು ಪ್ರಸ್ತಾಪ ಮಾಡಿಲ್ಲ. ಸಾಹಿತ್ಯ ಲೋಕದಲ್ಲಿ ತನ್ನದೇ ಅದ ಚಾಪು ಮೂಡಿಸಿದ ವೀರಹನುಮಾನ ಅವರನ್ನು ಸರಕಾರ ಗುರುತಿಸಿ ಪ್ರಶಸ್ತಿ ನೀಡಿರುವುದು ಅತ್ಯಂತ ಸಂತೋಷದಾಯಕವಾಗಿದೆ.

ವೀರ ಹನುಮಾನ್ ಅವರಿಗೆ ರಾಜ್ಯೋತ್ಸವದ ಪ್ರಶಸ್ತಿ ದೊರೆತಿರುವುದು ಜಿಲ್ಲೆಯ ಸಾಹಿತಿಗಳಿಗೆ ಸಿಕ್ಕಿರುವುದು ಮನ್ನಣೆ ಎಂದರು. ಶಾಸಕರು ಶಿವರಾಜ್ ಪಾಟೀಲ್ ಅವರು ಮಾತನಾಡಿ, ಮೈಸೂರು ನಂತರ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ರಾಯಚೂರು ಜಿಲ್ಲೆಯ ಮುಂಚೂಣಿಯಲ್ಲಿದೆ. ತೆಲಂಗಾಣ ಗಡಿಭಾಗದ ರಾಯಚೂರು ಜಿಲ್ಲೆಯ ಸಾಹಿತಿಗಳನ್ನು ಹೊಂದಿರುವ ಜಿಲ್ಲೆ ಎಂದು ಹೆಗ್ಗಳಿಗೆ ಪಡೆದುಕೊಂಡಿದೆ. ಸಾಹಿತ್ಯ ಕ್ಷೇತ್ರದಲ್ಲಿ ತನ್ನನ್ನು ತಾನು ಗುರುತಿಸಿಕೊಂಡು ರಾಜ್ಯೋತ್ಸವದ ಪ್ರಶಸ್ತಿ ದೊರೆತಿರುವುದು ಬಹಳ ಸಂತೋಷವಾಗಿದೆ.ಕಾಂಗ್ರೆಸ್ ಜಿಲ್ಲಾಧ್ಯಕ್ಷರು ಕೆ. ಶಾಂತಪ್ಪ ಅವರು ಮಾತನಾಡಿ, ವೀರ ಹನುಮಾನ್ ದೊರೆತಿರುವ ರಾಜ್ಯೋತ್ಸವದ ಅತ್ಯಂತ ದೊಡ್ಡ ಪ್ರಶಸ್ತಿಯಾಗಿದೆ. ರಾಜ್ಯ ಸರಕಾರ ವೀರ ಹನುಮಾನ್ ಅವರನ್ನು ಗುರುತಿಸಿ ರಾಜ್ಯೋತ್ಸವದ ಪ್ರಶಸ್ತಿ ನೀಡಿರುವುದು ಪ್ರಶಸ್ತಿಗೆ ದೊಡ್ಡ ಗೌರವ ಸಿಕ್ಕಾದಂತಾಗಿದೆ.ಮುನ್ನೂರು ಕಾಪು ಸಮಾಜ ಸಾಹಿತಿಗಳನ್ನು ಗುರುತಿಸಿ ಸನ್ಮಾನ ಮಾಡುತ್ತಿರುವ ಅತ್ಯಂತ ಹೆಮ್ಮೆ ತಂದಿದೆ. ಹಿರಿಯ ಸಾಹಿತಿಗಳು ಯುವ ಪ್ರತಿಭೆಗಳನ್ನು ಹೊರ ತರವುದು ಅಗತ್ಯವಿದೆ ಎಂದರು.ಅಂಗವಿಕಲರಾದರು ಹೇಮರೆಡ್ಡಿ ಅವರು ತಮ್ಮ ಪ್ರತಿಭೆಯ ಮೂಲಕ ವರ್ಣರಂಜಿತ ಪ್ರಶಸ್ತಿಗೆ ಆಯ್ಕೆಯಾಗಿರುವುದು ಜಿಲ್ಲೆ ಸಿಕ್ಕ ಸಂದ ಗೌರವವಾಗಿದೆ.

ಈ ಸಂದರ್ಭದಲ್ಲಿ ಮುನ್ನೂರು ಕಾಪು ಸಮಾಜದ ಹಿರಿಯ ಮುಖಂಡರು ಹಾಗೂ ಮಾಜಿ ಶಾಸಕರು ಎ. ಪಾಪಾರೆಡ್ಡಿ, ಸಮಾಜದ ಅಧ್ಯಕ್ಷರು ಬೆಲ್ಲಂ ನರಸರೆಡ್ಡಿ,

ಯು.ಕೃಷ್ಣಮೂರ್ತಿ,ಕೆ. ಶಾಂತಪ್ಪ, ಜಯವಂತರಾವ್ ಪತಂಗಿ, ಮಹಾಂತೇಶ್ ಮಸ್ಕಿ, ಗಾಧರ ಬೆಟ್ಟಪ್ಪ, ಜಯಣ್ಣ,ಮಹಮ್ಮದ್ ಶಾಲಂ ಸೇರಿದಂತೆ ಉಪಸ್ಥಿತರಿದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪಠ್ಯೇತರ ಚಟುವಟಿಕೆಗಳೂ ಮುಖ್ಯ: ರಾಜಕುಮಾರ ರಾಠೋಡ



ಕಲಬುರಗಿ:

ಮಕ್ಕಳು ವಿದ್ಯಾಭ್ಯಾಸದ ಜೊತೆಗೆ ದೈಹಿಕ ಹಾಗೂ ಬೌದ್ಧಿಕ ಚಟುವಟಿಕೆಗಳಲ್ಲಿಯೂ ಭಾಗವಹಿಸುವಂತೆ ಶಿಕ್ಷಕರು ಮತ್ತು ಪಾಲಕರು ಪ್ರೋತ್ಸಾಹಿಸಬೇಕು ಎಂದು ಕಲಬುರಗಿ ಜಿಲ್ಲಾ ಬಾಲಭವನ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಕುಮಾರ ರಾಠೋಡ ಹೇಳಿದರು.

ನಗರದ ಆಳಂದ ಕಾಲೋನಿಯ ಬಾಲಕಿಯರ ಬಾಲಮಂದಿರದಲ್ಲಿ ಗುರುವಾರ ರಾಜ್ಯ ಬಾಲಭವನ ಸೊಸೈಟಿ, ಬೆಂಗಳೂರು, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಜಿಲ್ಲಾ ಬಾಲಭವನ ಸಮಿತಿ ಕಲಬುರಗಿ ಇವುಗಳ ಸಂಯುಕ್ತಾಶ್ರಯದಲ್ಲಿ ರಾಜ್ಯ ಮಟ್ಟದ ಕಲಾಶ್ರೀ ಪ್ರಶಸ್ತಿಗಾಗಿ, ಜಿಲ್ಲಾ ಮಟ್ಟದ ಮಕ್ಕಳ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸ್ಪರ್ಧೆಗಳಲ್ಲಿ ಭಾಗವಹಿಸಿದ ಮಕ್ಕಳು ಜಿಲ್ಲಾ ಮಟ್ಟದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನಗಳನ್ನು ಪಡೆದು, ರಾಜ್ಯ ಮಟ್ಟದಲ್ಲಿಯೂ ಪ್ರಶಸ್ತಿ ಗಳಿಸುವಂತಾಗಬೇಕು ಎಂದು ಮಕ್ಕಳಲ್ಲಿ ಉತ್ಸಾಹ ತುಂಬಿದರು.

ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ವಿಶ್ವರಾಧ್ಯ ಇಜೇರಿ ಮಾತನಾಡಿ, ಮಕ್ಕಳಲ್ಲಿನ ಕಲಾ ಪ್ರತಿಭೆಯನ್ನು ಗುರುತಿಸಲು ಇಂತಹ ವೇದಿಕೆಗಳು ತುಂಬಾ ಉಪಯುಕ್ತವಾಗಿವೆ. ಪಾಲಕರು ಮಕ್ಕಳ ಆಸಕ್ತಿಯನ್ನು ಅರಿತು ಅವರನ್ನು ಹುರಿದುಂಬಿಸಬೇಕೇ ಹೊರತು, ಅವರ ಉತ್ಸಾಹ ಕುಗ್ಗಿಸುವ ಕೆಲಸ ಮಾಡಬಾರದು. ಜಿಲ್ಲಾ ಬಾಲಭವನವು ಉತ್ತಮ ಕಾರ್ಯ ಮಾಡುತ್ತಿದ್ದು, ಇದರಿಂದ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಅನುಕೂಲವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 9ರಿಂದ 16 ವರ್ಷ ವಯಸ್ಸಿನ ಮಕ್ಕಳಿಗಾಗಿ ಸೃಜನಾತ್ಮಕ ಕಲೆ, ಸೃಜನಾತ್ಮಕ ಬರವಣಿಗೆ, ಸೃಜನಾತ್ಮಕ ಪ್ರದರ್ಶನ ಕಲೆ ಹಾಗೂ ವಿಜ್ಞಾನದಲ್ಲಿ ನೂತನ ಆವಿಷ್ಕಾರ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಸ್ಥಳೀಯ, ತಾಲ್ಲೂಕು ಮಟ್ಟದ ಮಕ್ಕಳು ಹಾಗೂ ಅಂಧ ಮಕ್ಕಳು ಸೇರಿದಂತೆ ಒಟ್ಟು 260 ಮಕ್ಕಳು ಭಾಗವಹಿಸಿದ್ದರು. ಎಂಟು ಮಂದಿ ತೀರ್ಪುಗಾರರು ಸ್ಪರ್ಧೆಗಳನ್ನು ಮೌಲ್ಯಮಾಪನ ಮಾಡಿ, ಪ್ರಥಮ, ದ್ವಿತೀಯ, ತೃತೀಯ ಹಾಗೂ ಸಮಾಧಾನಕರ ಬಹುಮಾನಗಳಿಗೆ ವಿಜೇತರನ್ನು ಆಯ್ಕೆ ಮಾಡಿದರು. ಬೆಂಗಳೂರಿನ ಕರ್ನಾಟಕ ರಾಜ್ಯ ಬಾಲಭವನ ಸೊಸೈಟಿಯ ಉಪಾಧ್ಯಕ್ಷ ಅನಿಲ ಜಮಾದಾರ ಅವರು ವಿಜೇತ ಮಕ್ಕಳಿಗೆ ಪ್ರಶಸ್ತಿ ಪತ್ರ ಹಾಗೂ ನಗದು ಬಹುಮಾನ ವಿತರಿಸಿದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಶಿವಶರಣಪ್ಪ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹಾಗೂ ಪ್ರಭಾರ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಲ್ಲಣ್ಣ ದೇಸಾಯಿ, ಅಧೀಕ್ಷಕಿ ಶಿಲ್ಪಾ ಹಿರೇಮಠ, ಪ್ರಥಮ ದರ್ಜೆ ಸಹಾಯಕ ಏಜಾಜ್ ಅಹ್ಮದ್, ಇಲಾಖೆಯ ಸಿಬ್ಬಂದಿ ಪ್ರೇಮಾ ಸುತಾರ್, ಸಂಪನ್ಮೂಲ ವ್ಯಕ್ತಿಗಳು, ಬಾಲಕಿಯರ ಬಾಲಮಂದಿರದ ಸಿಬ್ಬಂದಿ, ಮಕ್ಕಳು ಹಾಗೂ ಪಾಲಕರು ಉಪಸ್ಥಿತರಿದ್ದರು. ಜಿಲ್ಲಾ ಮಿಷನ್ ಸಂಯೋಜಕಿ ವಿಜಯಲಕ್ಷ್ಮಿ ಜಾಧವ್ ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಬಾಲಭವನ ಸಂಯೋಜಕಿ ಮಾನು ಹುಗಾರ್ ವಂದಿಸಿದರು.

ಭಾಲ್ಕಿಯಲ್ಲಿ ಬಾಲಯೇಸು ಪುಣ್ಯಕ್ಷೇತ್ರದ ವಾರ್ಷಿಕ ಜಾತ್ರಾ ಮಹೋತ್ಸವಕ್ಕೆ ಚಾಲನೆ



ಭಾಲ್ಕಿ:

ನಗರದ ಭಾಲ್ಕಿ-ನಿಲಂಗಾ ಮುಖ್ಯರಸ್ತೆಯಲ್ಲಿರುವ ಬಾಲಯೇಸು ಪುಣ್ಯಕ್ಷೇತ್ರ ಯೇಸು ನಿಲಯದ ವಾರ್ಷಿಕ ಜಾತ್ರಾ ಮಹೋತ್ಸವಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ಸಂಜೆ ಬಾಲಯೇಸುವಿನ ಭವ್ಯ ಮೆರವಣಿಗೆ ಭಕ್ತಿಭಾವ ಹಾಗೂ ಸಂಭ್ರಮದಿಂದ ನಡೆಯಿತು. ಮೂರು ದಿನಗಳ ಕಾಲ ನಡೆಯಲಿರುವ ಜಾತ್ರೆಯ ಮೊದಲ ದಿನ ನಗರದ ಪ್ರಮುಖ ವೃತ್ತಗಳ ಮೂಲಕ ಬಾಲಯೇಸುವಿನ ಆಕರ್ಷಕ ಮೆರವಣಿಗೆ ಸಾಗಿತು. ಅಪಾರ ಸಂಖ್ಯೆಯ ಭಕ್ತರು ಮೆರವಣಿಗೆಯಲ್ಲಿ ಪಾಲ್ಗೊಂಡು ಭಕ್ತಿ ಮತ್ತು ಶ್ರದ್ಧೆ ಮೆರೆದರು. ಭಜನೆ, ಪ್ರಾರ್ಥನೆ ಹಾಗೂ ಧಾರ್ಮಿಕ ಭಕ್ತಿಗೀತೆಗಳೊಂದಿಗೆ ಸಾಗಿದ ಮೆರವಣಿಗೆ ಭಕ್ತರ ಗಮನ ಸೆಳೆಯಿತು. ಎಲ್ಲೆಡೆ ಭಕ್ತಿಮಯ ವಾತಾವರಣ ನಿರ್ಮಾಣವಾಗಿತ್ತು.

ಇದಕ್ಕೂ ಮುನ್ನ ಗುಲಬರ್ಗಾ ಧರ್ಮಕ್ಷೇತ್ರದ ಫಾದರ್ ಸಂತೋಷ್ ಬಾಪು ಅವರ ನೇತೃತ್ವದಲ್ಲಿ ಸಂಭ್ರಮದ ಪವಿತ್ರ ಬಲಿಪೂಜೆ ನೆರವೇರಿತು. ಭಕ್ತರು ವಿಶೇಷ ಪ್ರಾರ್ಥನೆ ಸಲ್ಲಿಸಿ ಬಾಲಯೇಸುವಿನ ಆಶೀರ್ವಾದ ಪಡೆದರು.

ನ. 7ರಂದು ಬೆಂಗಳೂರಿನ ಸಹಾಯಕ ಧರ್ಮಾಧ್ಯಕ್ಷ ಆರೋಕ್ಯ ರಾಜ್ ಸತೀಶಕುಮಾರ್ ಅವರ ನೇತೃತ್ವದಲ್ಲಿ ವಿಶೇಷ ಬಲಿಪೂಜೆ ನಡೆಯಲಿದೆ. ಗುಲಬರ್ಗಾ ಧರ್ಮಕ್ಷೇತ್ರದ ರಾಬರ್ಟ್ ಮೈಕಲ್ ಮಿರಾಂಢ ಹಾಗೂ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದೇವರು ಭಾಗವಹಿಸಲಿದ್ದಾರೆ.

ನ. 8ರಂದು ನಡೆಯಲಿರುವ ಸಮಾರೋಪ ಸಮಾರಂಭದ ವಿಶೇಷ ಕಾರ್ಯಕ್ರಮಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಖಂಡ್ರೆ ಚಾಲನೆ ನೀಡಲಿದ್ದಾರೆ. ಈ ವರ್ಷದ ಜಾತ್ರಾ ಮಹೋತ್ಸವವನ್ನು ಕುಟುಂಬದ ವರ್ಷದ ಆಶಯದೊಂದಿಗೆ ಆಚರಿಸಲಾಗುತ್ತಿದ್ದು, ಮೂರು ದಿನಗಳಲ್ಲಿ ಸುಮಾರು 15 ಸಾವಿರ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಜಾತ್ರಾ ಮಹೋತ್ಸವದ ಅಂಗವಾಗಿ ಅಂತರ್ಧರ್ಮೀಯ ಸಂವಾದ, ಪಾಪ ನಿವೇದನೆ, ಆಪ್ತ ಸಮಾಲೋಚನೆ, ರೋಗಿಗಳಿಗಾಗಿ ವಿಶೇಷ ಪ್ರಾರ್ಥನೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಜಾತ್ರಾ ಉತ್ಸವ ಸಮಿತಿ ಸಂಯೋಜಕ ಫಾದರ್ ಡೇವಿಡ್ ಆಂಟೋನಿ ತಿಳಿಸಿದ್ದಾರೆ.



ಬಸ್ ಟಿಕೆಟ್, ಹಾಲು-ಮೊಸರು ದರ ಏರಿಕೆ ಖಂಡಿಸಿ ಬಿಜೆಪಿಯಿಂದ ಪ್ರತಿಭಟನೆ

ಕಲಬುರಗಿ:

ರಾಜ್ಯ ಕಾಂಗ್ರೆಸ್ ಸರ್ಕಾರ ಬಸ್ ಟಿಕೆಟ್ ಹಾಗೂ ಹಾಲು, ಮೊಸರಿನ ದರ ಹೆಚ್ಚಳ ಮಾಡಿರುವುದನ್ನು ಖಂಡಿಸಿ ಬಿಜೆಪಿ ವತಿಯಿಂದ ನಗರದ ಕೇಂದ್ರ ಬಸ್ ನಿಲ್ದಾಣದ ಎದುರು ಪ್ರತಿಭಟನೆ ನಡೆಸಲಾಯಿತು.

ಕಾಂಗ್ರೆಸ್ ಸರ್ಕಾರದ ಜನವಿರೋಧಿ ಬೆಲೆ ಏರಿಕೆ ನೀತಿಯನ್ನು ಖಂಡಿಸಿ ಘೋಷಣೆ ಕೂಗಿದ ಬಿಜೆಪಿ ಕಾರ್ಯಕರ್ತರು, ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಮಾತನಾಡಿದ ಮಾಜಿ ಸಂಸದ ಡಾ. ಉಮೇಶ್ ಜಾಧವ್, ಸ್ವಾತಂತ್ರ್ಯಾನಂತರ ದೇಶದಲ್ಲಿ ಈ ಪ್ರಮಾಣದಲ್ಲಿ ಬಸ್ ಟಿಕೆಟ್ ದರ ಹೆಚ್ಚಳ ಮಾಡಿರುವುದು ಇದೇ ಮೊದಲು. ಶೇ.20ರಿಂದ 45ರಷ್ಟು ಟಿಕೆಟ್ ದರ ಏರಿಕೆ ಮಾಡಲಾಗಿದೆ ಎಂದು ಆರೋಪಿಸಿದರು. ಗ್ರಾಮೀಣ ಭಾಗದಲ್ಲಿ ಜನರಿಗೆ ಉದ್ಯೋಗವಿಲ್ಲದೆ ಸಂಕಷ್ಟ ಎದುರಾಗಿದೆ. ಇಂತಹ ಸಂದರ್ಭದಲ್ಲಿ ಪ್ರಯಾಣಿಕರು ಹೆಚ್ಚುವರಿ ಹಣವನ್ನು ಎಲ್ಲಿಂದ ತರುತ್ತಾರೆ ಎಂದು ಪ್ರಶ್ನಿಸಿದ ಅವರು, ಕೂಡಲೇ ಹೆಚ್ಚಿಸಿರುವ ದರವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು. ರಾಜ್ಯದಲ್ಲಿ ಬರಗಾಲ ಘೋಷಣೆಯಾಗಿದ್ದು, ಗ್ರಾಮೀಣ ಭಾಗದ ಜನರು ಉದ್ಯೋಗಕ್ಕಾಗಿ ಅಲೆದಾಡುತ್ತಿದ್ದಾರೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ಸಾರ್ವಜನಿಕ ಸಾರಿಗೆ ಬಸ್‌ಗಳ ಟಿಕೆಟ್ ದರ ಹೆಚ್ಚಿಸಿರುವುದು ಖಂಡನೀಯ ಎಂದು ಹೇಳಿದರು. ಹಾಲು, ಮೊಸರು, ತುಪ್ಪ ಹಾಗೂ ಎಣ್ಣೆ ಪದಾರ್ಥಗಳ ಬೆಲೆ ದುಪ್ಪಟ್ಟಾಗಿದೆ. ಹಬ್ಬದ ಸಂದರ್ಭದಲ್ಲಿ ಬೆಲೆ ಏರಿಕೆ ಮಾಡುವ ಮೂಲಕ ಜನರಿಗೆ ಮತ್ತಷ್ಟು ಸಂಕಷ್ಟ ಉಂಟುಮಾಡಲಾಗಿದೆ. ಕಾಂಗ್ರೆಸ್ ಸರ್ಕಾರ ಸಂವಿಧಾನ ವಿರೋಧಿ ಹಾಗೂ ಬಡವರು, ರೈತರು ಮತ್ತು ಕೃಷಿ ಕಾರ್ಮಿಕರ ವಿರೋಧಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ, ಚಂದು ಪಾಟೀಲ್, ವಿಶಾಲ ದರ್ಗಿ, ಅವ್ವಣ್ಣ ಮ್ಯಾಕೇರಿ, ಶರಣಪ್ಪ ತಳವಾರ, ಲಿಂಗರಾಜ ಬಿರಾದಾರ, ಸಂತೋಷ್ ಹಾದಿಮನಿ, ಶೋಭಾ ಬಾಣಿ, ರಾಜು ವಾಡೇಕರ್ ಆನಂದ ಪಾಟೀಲ್, ಬಾಬುರಾವ್ ಹಾಗರಗುಂಡಗಿ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.



ಪಟಾಕಿ ಮಳಿಗೆಗಳಲ್ಲಿ ಅಪ್ರಾಪ್ತ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಂಡರೆ ಕ್ರಮ: ಮುಹಮ್ಮದ್ ಬಷೀರ್ ಅನ್ಸಾರಿ

ಕಲಬುರಗಿ:

ದೀಪಾವಳಿ ಹಬ್ಬದ ಸಂದರ್ಭದಲ್ಲಿ ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸಲಾಗಿರುವ ಪಟಾಕಿ ಮಾರಾಟ ಮಳಿಗೆಗಳಲ್ಲಿ 18 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳದಂತೆ ಸೂಚನೆ ನೀಡಲಾಗಿದೆ ಎಂದು ಕಲಬುರಗಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಕಾರ್ಮಿಕ ಆಯುಕ್ತ ಮುಹಮ್ಮದ್ ಬಷೀರ್ ಅನ್ಸಾರಿ ತಿಳಿಸಿದ್ದಾರೆ.

ಕಲಬುರಗಿ ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ಪಟಾಕಿ ಮಾರಾಟ ಮಳಿಗೆಗಳನ್ನು ಸ್ಥಾಪಿಸಲಾಗುತ್ತಿದೆ. ಪಟಾಕಿ ತಯಾರಿಕೆ, ಮಾರಾಟ ಹಾಗೂ ಇತರ ಪ್ರಕ್ರಿಯೆಗಳು ಅಪಾಯಕಾರಿ ಉದ್ದಿಮೆಗಳ ವ್ಯಾಪ್ತಿಗೆ ಬರುವುದರಿಂದ ಈ ಮಳಿಗೆಗಳಲ್ಲಿ 18 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಒಂದು ವೇಳೆ ಪಟಾಕಿ ಮಾರಾಟ ಮಳಿಗೆಗಳು ಅಥವಾ ತಯಾರಿಕಾ ಘಟಕಗಳಲ್ಲಿ 18 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಂಡಿರುವುದು ಕಂಡುಬಂದರೆ, ಸಂಬಂಧಪಟ್ಟ ಮಾಲೀಕರ ವಿರುದ್ಧ ಬಾಲಕಾರ್ಮಿಕ ಕಾಯ್ದೆಯಡಿ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದ್ದಾರೆ.

ಬಾಲ ಹಾಗೂ ಕಿಶೋರ ಕಾರ್ಮಿಕರ ದುಡಿಮೆಯನ್ನು ನಿಯಂತ್ರಿಸಲು ಮತ್ತು ನಿಷೇಧಿಸಲು ಬಾಲ್ಯಾವಸ್ಥೆ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986ಕ್ಕೆ 2016ರಲ್ಲಿ ತಿದ್ದುಪಡಿ ತಂದು ಜಾರಿಗೆ ತರಲಾಗಿದೆ. ಈ ಕಾಯ್ದೆಯನ್ವಯ ಎಲ್ಲ ಉದ್ಯೋಗ ಮತ್ತು ಪ್ರಕ್ರಿಯೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಡಿಜಿಟಲ್ ಯುಗದಲ್ಲಿ ಕನ್ನಡದ ಬಳಕೆ ವ್ಯಾಪಕವಾಗುತ್ತಿದೆ : ಸಾಧನಾ ರಂಜೋಳಕರ್



ಬೀದರ್,

ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಬಳಕೆ ವ್ಯಾಪಕವಾಗಿ ಹೆಚ್ಚುತ್ತಿದೆ. ಜಾಗತಿಕ ಹಾಗೂ ಡಿಜಿಟಲ್ ಯುಗದಲ್ಲಿ ಕನ್ನಡ ಭಾಷೆ ಬೆಳವಣಿಗೆ ಕಾಣುತ್ತಿರುವುದು ಸಂತಸ ತಂದಿದೆ ಎಂದು ಸಾಹಿತಿ ಸಾಧನಾ ರಂಜೋಳಕರ್ ಹೇಳಿದರು.

ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಚಕೋರ ಸಾಹಿತ್ಯ ವಿಚಾರ ವೇದಿಕೆ, ಬೀದರ್ ಹಾಗೂ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ ನಡೆದ ಏಕೀಕರಣ ಚಳವಳಿ ಮತ್ತು ಕನ್ನಡದ ಅಸ್ಮಿತೆ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂಟರ್ನೆಟ್, ಸಾಮಾಜಿಕ ಜಾಲತಾಣಗಳು ಹಾಗೂ ವಾಟ್ಸ್ ಆ್ಯಪ್‌ನಲ್ಲಿಯೂ ಕನ್ನಡದ ಬಳಕೆ ಹೆಚ್ಚುತ್ತಿದೆ. ಗೂಗಲ್, ಮೆಟಾ ಮತ್ತು ಮೈಕ್ರೋಸಾಫ್ಟ್‌ನಂತಹ ಜಾಗತಿಕ ಸಂಸ್ಥೆಗಳು ಕನ್ನಡ ಭಾಷೆಗೆ ಹೆಚ್ಚಿನ ಪ್ರಾತಿನಿಧ್ಯ ನೀಡುತ್ತಿವೆ. ಉದ್ಯೋಗ ಕ್ಷೇತ್ರದಲ್ಲಿಯೂ ಕನ್ನಡಿಗರಿಗೆ ಆದ್ಯತೆ ನೀಡಬೇಕು ಎಂದು ಅವರು ಹೇಳಿದರು.

ಹಿರಿಯ ಸಾಹಿತಿ ರಮೇಶ್ ಬಿರಾದಾರ್ ಮಾತನಾಡಿ, ಆಲೂರು ವೆಂಕಟರಾಯರನ್ನು ಕರ್ನಾಟಕ ಕುಲಪುರೋಹಿತ ಎಂದು ಕರೆಯಲಾಗುತ್ತದೆ. ಅವರು 1917ರಲ್ಲಿ ಬರೆದ ಕರ್ನಾಟಕ ಗತವೈಭವ ಗ್ರಂಥವು ವಿಭಜನೆಯಾಗಿದ್ದ ಕನ್ನಡಿಗರಿಗೆ ವಿಜಯನಗರ ಮತ್ತು ಚಾಲುಕ್ಯರಂತಹ ಹಳೆಯ ಸಾಮ್ರಾಜ್ಯಗಳ ವೈಭವವನ್ನು ನೆನಪಿಸಿ, ಒಗ್ಗೂಡುವಂತೆ ಪ್ರೇರೇಪಿಸಿತು. ಹುಯಿಲಗೋಳ ನಾರಾಯಣರಾಯರು ರಚಿಸಿದ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಗೀತೆ ಏಕೀಕರಣ ಚಳವಳಿಯ ಅಧಿಕೃತ ಗೀತೆಯಾಗಿ ಲಕ್ಷಾಂತರ ಹೋರಾಟಗಾರರಲ್ಲಿ ಸ್ಫೂರ್ತಿ ತುಂಬಿತು ಎಂದು ನುಡಿದರು.

ಬಿವಿಬಿ ಮಹಾವಿದ್ಯಾಲಯದ ಇತಿಹಾಸ ವಿಭಾಗದ ಮುಖ್ಯಸ್ಥೆ ಡಾ. ಶಿವಲೀಲಾ ವಿರಯ್ಯ ಮಾತನಾಡಿ, ಡಾ. ಸಿದ್ದಲಿಂಗಯ್ಯ ಕನ್ನಡದ ಪ್ರಮುಖ ದಲಿತ ಕವಿ ಹಾಗೂ ಹೋರಾಟಗಾರರಾಗಿದ್ದರು.

ಅವರ ಹೊಲೆ ಮಾದಿಗರ ಹಾಡು ಮತ್ತು ಸಾವಿರಾರು ನದಿಗಳು ಕವನ ಸಂಕಲನಗಳ ಹಾಡುಗಳು ಇಂದಿಗೂ ಸಾಮಾಜಿಕ ಹೋರಾಟಗಳಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿವೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯ ವಿಜಯಕುಮಾರ್ ತೋರಣೇಕರ್ ಹಾಗೂ ಜಗದೇವಿ ಸಿ. ದುಬಲಗುಂಡಿ ಮಾತನಾಡಿದರು.

ಈ ಸಂದರ್ಭದಲ್ಲಿ ಚಕೋರ ಸಾಹಿತ್ಯ ವಿಚಾರ ವೇದಿಕೆಯ ಜಿಲ್ಲಾ ಸಂಚಾಲಕಿ ಡಾ. ಮಕ್ತುಂಬಿ ಎಂ. ಸೇರಿದಂತೆ ಕಾಲೇಜಿನ ಸಿಬ್ಬಂದಿ ವರ್ಗದವರು ಹಾಗೂ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಬಡವರನ್ನು ಸುಟ್ಟ ಬೆಲೆಯೇರಿಕೆ ಬಿಸಿ ಸರ್ಕಾರಗಳನ್ನೂ ಸುಟ್ಟೀತು

ಮಹಿಳೆಯರಿಗೆ ಉಚಿತ ಪ್ರಯಾಣ ಯೋಜನೆ ನೀಡಿ, ಟಿಕೆಟ್ ದರ ಹೆಚ್ಚಿಸುವುದು ಪುರುಷರ ಸಿಟ್ಟಿಗೆ ಕಾರಣವಾಗಿದೆ. ಇನ್ನೂರು ಯೂನಿಟ್ ಉಚಿತ ವಿದ್ಯುತ್ ನೀಡಿ ವಿದ್ಯುತ್ ದರ ಹೆಚ್ಚಿಸುವುದು, ರೈತರಿಗೆ ಪ್ರೋತ್ಸಾಹ ಧನ ಎಂದು ಹಾಲಿನ ದರ ಪದೇ ಪದೇ ಹೆಚ್ಚಿಸುವುದು, ಒಂದು ಕಡೆಯಿಂದ ಕೊಟ್ಟು ಮತ್ತೊಂದು ಕಡೆಯಿಂದ ಕಿತ್ತುಕೊಳ್ಳುವ ಸರ್ಕಾರ ಎಂಬ ಆರೋಪಕ್ಕೆ ಕಾಂಗ್ರೆಸ್ ಸರ್ಕಾರ ತುತ್ತಾಗಿದೆ. ದರ ಏರಿಕೆ ಅನಿವಾರ್ಯ. ಆದರೆ, ಅದನ್ನು ವಿವೇಚನೆಯಿಂದ ಮಾಡಬೇಕಿದೆ.

ಈ ವರ್ಷದ ಮಾರ್ಚ್‌ನಲ್ಲಿ ಇರಾನ್ ಮೇಲೆ ಅಮೆರಿಕ- ಇಸ್ರೇಲ್ ಅನ್ಯಾಯವಾಗಿ ಸಾರಿದ ಯುದ್ಧದ ಕಾರಣದಿಂದ ದೇಶದಲ್ಲಿ ಪೆಟ್ರೋಲ್, ಡೀಸೆಲ್, ಆಟೋ ಗ್ಯಾಸ್, ಸಿಲಿಂಡರ್ ದರ ಏರಿಸಲಾಯಿತು. ಇಂಧನ ದರ ಏರಿಕೆಯ ಬೆನ್ನಲ್ಲೇ ಬೇಳೆ ಕಾಳು, ಅಕ್ಕಿ, ಸಕ್ಕರೆ ಬೆಲೆಯೂ ಏರಿದೆ. ಮೋದಿ ಅವರು 2013ರಲ್ಲಿ ಯುಪಿಎ ಸರ್ಕಾರದ ಬೆಲೆ ಏರಿಕೆಯ ವಿರುದ್ಧ ಎಡೆಬಿಡದೆ ಉದ್ದುದ್ದ ಪ್ರಚಾರ ಭಾಷಣ ಮಾಡಿ ಅಧಿಕಾರಕ್ಕೆ ಬಂದವರು. ದಿನ ಬಳಕೆಯ ವಸ್ತುಗಳ ಬೆಲೆ ಇಳಿಕೆಯಾಗಬೇಕಿದ್ರೆ, ಬಿಜೆಪಿಗೆ ಮತ ಹಾಕಿ ಎಂದು ಪ್ರಚಾರ ಸಭೆಗಳಲ್ಲಿ ಹೇಳಿದ್ದರು. ನಂತರ ಅಧಿಕಾರಕ್ಕೆ ಬಂದ ಮೋದಿ ಸರ್ಕಾರ ಯಾವ ಬೆಲೆಯನ್ನೂ ಇಳಿಸಲಿಲ್ಲ. ಕಡೆಗೆ ಅವರು ಬೆಲೆಯೇರಿಕೆ ಎಂಬ ಪದ ಬಳಕೆಯನ್ನೇ ನಿಲ್ಲಿಸಿದ್ದಾರೆ.

ಅವರ ಮೊದಲ ಅವಧಿ ಮುಗಿದು ಎರಡನೇ ಅವಧಿಗೆ ಕಾಲಿಡುತ್ತಿದ್ದಂತೆ ಕೋವಿಡ್ ಕಾರಣ ಹೇಳಿ ಅಡುಗೆ ಅನಿಲ ಸಿಲಿಂಡರ್ ದರ ಸಾವಿರ ದಾಟಿಸಿದ್ದರು. ಪೆಟ್ರೋಲ್ ನೂರರ ಗಡಿ ದಾಟಿತ್ತು. ಡೀಸೆಲ್ ಮೊದಲ ಬಾರಿಗೆ ಎಂಬತ್ತರ ಸಮೀಪ ಬಂದಿತ್ತು. ಅಡುಗೆ ಎಣ್ಣೆ ನೂರೈವತ್ತು-ಇನ್ನೂರು ಗಡಿ ದಾಟಿತ್ತು. ಬೇಳೆ ಕಾಳು, ರಸಗೊಬ್ಬರ, ಕೀಟನಾಶಕ ಎಲ್ಲದರ ದರವನ್ನೂ ಮೋದಿ ಸರ್ಕಾರ ಏರಿಸಿ ಜನರಿಗೆ ಬೆಲೆಯೇರಿಕೆಯ ಬಿಸಿ ಮುಟ್ಟಿಸಿತ್ತು. ಮೋದಿ ಎಷ್ಟೇ ಬೆಲೆ ಏರಿಸಿದರೂ ಅವರ ಬೆಂಬಲಿಗರು ಅದು ದೇಶದ ಅಭಿವೃದ್ಧಿಗಾಗಿ ಎಂದು ಜನರ ಕಣ್ಣಿಗೆ ಮಂಕುಬೂದಿ ಎರಚುತ್ತಾ ಬಂದ್ರು. ಕೆಲವು ಅಂಧ ಭಕ್ತರು ''ಪೆಟ್ರೋಲ್ ದರ ಸಾವಿರ ರೂಪಾಯಿ ಆದರೂ ನನ್ನ ವೋಟು ಮೋದಿಜೀಗೆ, ಬಿಜೆಪಿಗೆ'' ಎಂದರು. ಈಗ ಯುದ್ಧ ತಣ್ಣಗಾಗಿದೆ ಅಕ್ಕಿ ಬೆಲೆ ನೂರರ ಸಮೀಪಕ್ಕೆ ಬಂದಿದೆ, ಸಕ್ಕರೆ ಕೇಜಿಗೆ 65 ರೂಪಾಯಿಯವರೆಗೆ ಏರಿಕೆಯಾಗಿದೆ. ಪ್ರತಿಯೊಂದು ವಸ್ತುವಿನ ಮೇಲೂ ಜಿಎಸ್‌ಟಿ ಹಾಕಿ ಕೇಂದ್ರ ಸರ್ಕಾರ ಬೊಕ್ಕಸ ತುಂಬಿಸಿಕೊಳ್ಳುತ್ತಿದೆ.

ಇತ್ತ ರಾಜ್ಯದಲ್ಲಿ 2023ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪಂಚ ಗ್ಯಾರಂಟಿಯಾದ ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಹತ್ತು ಕೆಜಿ ಅಕ್ಕಿ, ಯುವನಿಧಿ ಜಾರಿಗೆ ಕಾಂಗ್ರೆಸ್‌ಗಿಂತ ವಿಪಕ್ಷ ಬಿಜೆಪಿ ಒತ್ತಡ ಹೆಚ್ಚಾಗಿತ್ತು. ಅಧಿಕಾರಕ್ಕೆ ಬಂದ ಒಂದೇ ವಾರದಲ್ಲಿ ಶಕ್ತಿ ಯೋಜನೆಯಡಿ ರಾಜ್ಯದ ಎಲ್ಲ ಸ್ತರದ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಜಾರಿಯಾಯಿತು. ಇಡೀ ರಾಜ್ಯದಲ್ಲಿ ಮಹಿಳೆಯರ ಬಸ್ ಪ್ರಯಾಣ ಹೆಚ್ಚಾಯಿತು. ಶಿಕ್ಷಣ, ಉದ್ಯೋಗ ಎಂದು ಹೊರ ಬರುವ ಮಹಿಳೆಯರ ಪ್ರಮಾಣ ಹೆಚ್ಚಾಯಿತು. ಮಹಿಳಾ ಸಬಲೀಕರಣಕ್ಕೆ ಇದು ದೊಡ್ಡ ಕೊಡುಗೆಯಾಯಿತು. ಗೃಹಲಕ್ಷ್ಮಿ ಯೋಜನೆಯಡಿ ಬಿಪಿಎಲ್/ಎಪಿಎಲ್ ಕಾರ್ಡುದಾರರಿಗೆ ಮಾಸಿಕ ಎರಡು ಸಾವಿರ ಹಣ ನೀಡುವ ಯೋಜನೆ ಕುಂಟುತ್ತ ಎಡವುತ್ತಾ ಸಾಗುತ್ತಿದೆ. ಇನ್ನೂರು ಯೂನಿಟ್ ವಿದ್ಯುತ್ ನೀಡುವ ಯೋಜನೆಯೂ ಬಡ, ಕೂಲಿ ಕಾರ್ಮಿಕರ ತಿಂಗಳ ಹೊರೆಯನ್ನು ಕಡಿಮೆ ಮಾಡಿದೆ. ಆದರೆ, ಕೇಂದ್ರದ ಜೊತೆಗೆ ರಾಜ್ಯ ಸರ್ಕಾರವೂ ನಿರಂತರವಾಗಿ ಬೆಲೆಯೇರಿಕೆ ಮಾಡುತ್ತಿರುವುದು ಬಡವರು ಮತ್ತು ಮಧ್ಯಮ ವರ್ಗಗಳ ಆರ್ಥಿಕ ಹೊರೆಯನ್ನು ಹೆಚ್ಚಿಸುತ್ತಿದೆ. ಜೀವನ ಮಟ್ಟ ಏರಿಕೆ ಕಾಣುವ ಬದಲು ಅದು ಕುಸಿಯುವಂತಾಗಿರುವುದು ಸತ್ಯ.

ನವೆಂಬರ್ ತಿಂಗಳ ಆರಂಭದಲ್ಲಿ ರಾಜ್ಯದ ಜನರಿಗೆ ಬೆಲೆಯೇರಿಕೆ ಬಿಸಿ ತಟ್ಟಿದೆ. ನವೆಂಬರ್ ಒಂದರಿಂದ ಹಾಲಿನ ದರದಲ್ಲಿ ಎಂಟು ರೂಪಾಯಿ ಹೆಚ್ಚಳ ಮಾಡಿದ ಸರ್ಕಾರ ಇದೀಗ ಸಾರಿಗೆ ಬಸ್‌ಗಳ ದರವನ್ನು ಹೆಚ್ಚಿಸಿ ಜನರ ಆಕ್ರೋಶಕ್ಕೆ ತುತ್ತಾಗಿದೆ.

ನವೆಂಬರ್ 5ರಂದು ಬಿಎಂಟಿಸಿ ಟಿಕೆಟ್ ದರದಲ್ಲಿ ಶೇ 35ರಷ್ಟು, ಕೆಎಸ್‌ಆರ್‌ಟಿಸಿ ಸಹಿತ ಉಳಿದ ನಿಗಮಗಳಲ್ಲಿ ಶೇ 25ರಷ್ಟು ದರ ಏರಿಕೆ ಮಾಡಲಾಗಿದೆ. ಕಾಲಕಾಲಕ್ಕೆ ಎಲ್ಲ ಸರ್ಕಾರಗಳೂ ಬೆಲೆ ಏರಿಕೆ ಮಾಡುತ್ತಾ ಬಂದಿವೆ. ನಿಗಮಗಳು ನಷ್ಟದಲ್ಲಿವೆ. ಇಂತಹ ಸಮಯದಲ್ಲಿ ಬೆಲೆ ಸಹಜ ಪ್ರಕ್ರಿಯೆ ಎಂದು ಸರ್ಕಾರದ ಮಂತ್ರಿಗಳು ಹೇಳುತ್ತಾರೆ. ಆದರೆ, ಒಂದೇ ಬಾರಿ ಈ ಮಟ್ಟಿನ ಏರಿಕೆ ತೀವ್ರ ಟೀಕೆಗೆ ಗುರಿಯಾಗಿದೆ.

ಯಾವ ಸರ್ಕಾರವೇ ಆಗಲಿ ಬಡವರ ಬದುಕನ್ನು ಹೈರಾಣವಾಗಿಸುವ ದಿನ ಬಳಕೆಯ ವಸ್ತುಗಳ ಬೆಲೆ ಏರಿಕೆ, ಬಡವರ ಏಕೈಕ ಸಾರಿಗೆ ಬಸ್ ಟಿಕೆಟ್ ದರ ವಿಪರೀತ ಏರಿಕೆ ಮಾಡುವುದು ಸಮರ್ಥನೀಯವಲ್ಲ. ರಾಜ್ಯದಲ್ಲಿ ಶಕ್ತಿ ಯೋಜನೆಯಿಂದಾಗಿ ಮಹಿಳೆಯರು ಶಿಕ್ಷಣ, ಉದ್ಯೋಗ ಸೇರಿದಂತೆ ಸ್ವತಂತ್ರವಾಗಿ ಸಂಚರಿಸಲು ಉಚಿತ ಪ್ರಯಾಣ ಸೌಲಭ್ಯ ಒದಗಿಸಿರುವುದು ದೇಶಕ್ಕೇ ಮಾದರಿ. ಇತ್ತೀಚೆಗೆ ಕೇರಳದಲ್ಲೂ ಈ ಯೋಜನೆಯನ್ನು ಭಾಗಶಃ ತಿದ್ದುಪಡಿಯೊಂದಿಗೆ ಜಾರಿಗೆ ತರಲಾಗಿದೆ. ಇಂತಹ ಯೋಜನೆಗಳ ಬಗ್ಗೆ ಮೂಗು ಮುರಿಯುವವರು ಇದ್ದೇ ಇರುತ್ತಾರೆ. ರಾಜ್ಯದಲ್ಲಿ ಬಸ್ ಟಿಕೆಟ್ ದರ ಏರಿಸಿದ ತಕ್ಷಣ ಅವರ ಸಿಟ್ಟು ಮಹಿಳೆಯರಿಗೆ ನೀಡಿದ ಉಚಿತ ಯೋಜನೆಗಳ ಕಡೆಗೆ ತಿರುಗುತ್ತದೆ. ಅದು ಪುರುಷಹಂಕಾರ ಮತ್ತು ಮಹಿಳೆಯರೆಂದರೆ ಮನೆಯಲ್ಲಿ ಬಿದ್ದಿರಬೇಕು, ಗಂಡನ ಅಣತಿಯಂತೆ ನಡೆದುಕೊಳ್ಳಬೇಕು ಎಂಬ ಮನುವಾದಿಸ್ಥಿತಿಯ ಮುಂದುವರಿಕೆ. ಅದಕ್ಕೆ ಈಗ ಆಹಾರವಾಗಿದೆ ಸರ್ಕಾರದ ಎಡವಟ್ಟು.

ರಾಜ್ಯದಲ್ಲಿ ಇನ್ನೂರು ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಅದೇ ಸಮಯದಲ್ಲಿ ವಿದ್ಯುತ್ ದರ ಸರ್ಕಾರ ಏರಿಸಿತ್ತು. ಒಂದು ಕಡೆ ಉಚಿತ ಕೊಟ್ಟು, ಮತ್ತೊಂದು ಕಡೆ ದುಬಾರಿ ಶುಲ್ಕ ವಸೂಲಿಗಿಳಿದಿದೆ ಸರ್ಕಾರ ಎಂಬ ಆರೋಪ ಸ್ವಾಭಾವಿಕ. ಹಾಗೆ ನೋಡಿದರೆ ಬಡವರಿಗೆ ಯಾವುದೇ ಉಚಿತ ಯೋಜನೆ ನೀಡದಿದ್ದರೂ ಮೋದಿಯವರ ಒಕ್ಕೂಟ ಸರ್ಕಾರ ಎಲ್ಲ ವಸ್ತುಗಳ ದರ ಏರಿಕೆ ಮಾಡಿ ಬೊಕ್ಕಸ ತುಂಬಿಸಿಕೊಳ್ಳುತ್ತಿದೆ. ಸಣ್ಣದೊಂದು ಸೂಜಿ, ದಾರ, ಪೆನ್ಸಿಲ್, ಹಾಲು, ಮೊಸರು ಯಾವೊಂದು ವಸ್ತುವೂ ಜಿಎಸ್‌ಟಿಯಿಂದ ಹೊರತಾಗಿಲ್ಲ. ರೈತರು ಬೆಳೆ ಬೆಳೆಯಲು ಬಳಸುವ ಎಲ್ಲಾ ಪರಿಕರ, ಬೀಜ, ಗೊಬ್ಬರ, ಕೀಟನಾಶಕಗಳ ಬೆಲೆ ಹತ್ತು ವರ್ಷಗಳಲ್ಲಿ ದುಪ್ಪಟ್ಟಾಗಿದೆ.

ವಿಪಕ್ಷದಲ್ಲಿರುವ ಕಾರಣ ಬಿಜೆಪಿ ಮತ್ತು ಜೆಡಿಎಸ್‌ನವರು ರಾಜ್ಯದಲ್ಲಿ ಬೆಲೆಯೇರಿಕೆಯಾದಾಗ ಭಾರೀ ಗದ್ದಲ ಸೃಷ್ಟಿಸಿ ರಸ್ತೆಗಿಳಿದು ಪ್ರತಿಭಟಿಸುತ್ತಾರೆ. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆಯವರು ತಲೆ ಮೇಲೆ ಹಾಲಿನ ಕ್ಯಾನು ಹೊತ್ತು ಪ್ರತಿಭಟಿಸಿದ್ದರು. ಪ್ರತಿ ಮನೆಯಲ್ಲೂ ಬಳಸುವ ಸಿಲಿಂಡರ್ ದರ ಐವತ್ತು, ನೂರು ರೂಪಾಯಿಯಂತೆ ಏರಿಕೆಯಾದಾಗ ಅವರು ಕೈಗೆ ಸಿಗಲಿಲ್ಲ. ಕನಿಷ್ಠ ಜಿಎಸ್‌ಟಿಯಲ್ಲಿ ಸಿಗಬೇಕಿರುವ ನ್ಯಾಯಯುತ ಪಾಲು ಕೊಡುವಂತೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದ ಉದಾಹರಣೆ ಇಲ್ಲ. ಒಕ್ಕೂಟ ಸರ್ಕಾರ ಎಲ್ಲ ರಾಜ್ಯಗಳಿಗೂ ನ್ಯಾಯಯುತ ಪಾಲನ್ನು ಕೊಡಬೇಕು. ಅದರಲ್ಲೂ ಮೋದಿ ಸರ್ಕಾರ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಲೇ ಬಂದಿದೆ,. ಬರ ಪರಿಹಾರ, ಪ್ರವಾಹ ಪರಿಹಾರ ನೀಡುವಲ್ಲಿಯೂ ಕರ್ನಾಟಕವನ್ನು ನಿರ್ಲಕ್ಷಿಸುತ್ತಾ ಬರಲಾಗುತ್ತಿದೆ. ಅದು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗಲೂ ಪ್ರಾಮಾಣಿಕವಾಗಿ ನಡೆದುಕೊಂಡಿಲ್ಲ ಮೋದಿ ಸರ್ಕಾರ. ಬಿಜೆಪಿ ಮತ್ತು ಅವರ ಮಿತ್ರ ಪಕ್ಷಗಳಿಗೆ ಬೆಲೆಯೇರಿಕೆಯ ವಿರುದ್ಧ ಮಾತನಾಡುವ ನೈತಿಕತೆ ಇಲ್ಲ. ಆದರೆ, ಈ ಬರಗಾಲದಲ್ಲಿ ರಾಜ್ಯಸರ್ಕಾರ ಒಮ್ಮೆಗೇ ಈ ಪ್ರಮಾಣದ ಬಸ್ ಟಿಕೆಟ್ ದರ ಏರಿಕೆ ಮಾಡಿರುವುದು ಸರಿಯಲ್ಲ.

ಸರ್ಕಾರದ ಬೊಕ್ಕಸದಲ್ಲಿ ಹಣ ಇಲ್ಲ ಎಂದು ಸರ್ಕಾರದ ಖರ್ಚುಗಳಲ್ಲಿ ಕಡಿತ ಮಾಡಲಾಗಿದೆಯೇ? ಶಾಸಕರ ವೇತನ, ಭತ್ಯೆಯನ್ನು ಯಾವುದೇ ವಿರೋಧ ಇಲ್ಲದೇ ಎಲ್ಲಾ ಪಕ್ಷದವರು ಬೆಂಬಲಿಸಿ ಹೆಚ್ಚಿಸಿಕೊಳ್ಳುತ್ತಾರೆ. ಶಾಸಕರು, ಸಂಸದರು, ಮಂತ್ರಿಗಳ ಮನೆ ಭತ್ಯೆ, ಕಚೇರಿ ಭತ್ಯೆ,ಕಾರು, ಕಾರಿಗೆ ಪೆಟ್ರೋಲ್, ಡ್ರೈವರ್ ಸಂಬಳ ಎಲ್ಲವನ್ನೂ ಸಾರ್ವಜನಿಕರ ತೆರಿಗೆ ಹಣದಲ್ಲೇ ಭರಿಸಲಾಗುತ್ತದೆ. ಫೋನ್ ಬಿಲ್, ಸಹಾಯಕರ ವೇತನ, ಔಷಧಿ ಎಲ್ಲವೂ ಸರ್ಕಾರ ಕೊಡುತ್ತದೆ. ಹಾಗೆ ನೋಡಿದರೆ ದೇಶದಲ್ಲಿ ಅತಿದೊಡ್ಡ ಬಿಟ್ಟಿಭಾಗ್ಯದ ಫಲಾನುಭವಿಗಳು ರಾಜರಾರಣೆಗಳು. ಬರ ಇದೆ, ಅಭಿವೃದ್ಧಿಗೆ ದುಡ್ಡಿಲ್ಲ ಎಂದು ಜನಪ್ರತಿನಿಧಿಗಳ ಈ ಯಾವ ಸವಲತ್ತುಗಳಿಗೂ ಕುತ್ತು ಬರುವುದಿಲ್ಲ. ಬಡವರ ಮೇಲೆ ಮಾತ್ರ ಬೆಲೆ ಏರಿಕೆಯ ಬಿಸಿ ತಟ್ಟುತ್ತದೆ. ಇದನ್ನು ಸರ್ಕಾರಗಳು ಅರ್ಥ ಮಾಡಿಕೊಳ್ಳಬೇಕು. ಜನರ ತೆರಿಗೆ ಹಣದಲ್ಲಿ ಐಷಾರಾಮಿ ಬದುಕು ನಡೆಸುತ್ತಿರುವ ಅಧಿಕಾರಸ್ಥರು ಬಡವರ ಬದುಕಿನ ಬಗ್ಗೆಯೂ ಯೋಚಿಸಬೇಕಿದೆ.

ಚುನಾವಣೆ ಬಂದಾಗ ಬಣ್ಣ ಬಣ್ಣದ ಮಾತಿಗೆ ಮರುಳಾಗಿ, ಆಮಿಷಗಳಿಗೆ ಮತ ಮಾರಿಕೊಳ್ಳುವ ಜನ ಪ್ರಬುದ್ಧರಾಗಬೇಕಿದೆ. ಸರ್ಕಾರಗಳು ಕಲ್ಯಾಣ ಯೋಜನೆಗಳನ್ನು ಆರ್ಥಿಕ ಹೊರೆಯಾಗದ ರೀತಿಯಲ್ಲಿ ನಿಭಾಯಿಸುವುದನ್ನು ಕಲಿಯಬೇಕಿದೆ

ದೆಹಲಿಯಲ್ಲಿ ದಿನಕ್ಕೆ 20 ಸಿಗರೇಟು 'ಉಚಿತ' ಕೊಡುಗೆ! 'ವಿಷ' ಕಲೆತು ತತ್ತರಿಸಿದ ಪ್ರಾಣವಾಯು!

ಪ್ರತಿ ವರ್ಷ ನವೆಂಬರ್ ಬಂತೆಂದರೆ ದೆಹಲಿ ಜಗತ್ತಿನ ಅತಿ ದೊಡ್ಡ ಗ್ಯಾಸ್ ಚೇಂಬರ್ ಆಗುತ್ತದೆ. ಟಿವಿ ತೆರೆದರೆ ನ್ಯಾಯಾಲಯ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತದೆ. ಸರ್ಕಾರ ಮತ್ತೊಂದು ಸರ್ಕಾರವನ್ನು ದೂರುತ್ತದೆ. ಪಂಜಾಬ್ ಹರಿಯಾಣದ ಕಡೆ ಬೆರಳು ತೋರಿಸುತ್ತದೆ; ಹರಿಯಾಣ ದೆಹಲಿಯ ಕಡೆ ನೋಡುತ್ತದೆ. ರಾಜಕಾರಣಿಗಳ ಆರೋಪ-ಪ್ರತ್ಯಾರೋಪಕ್ಕೆ ಮಾತ್ರ ಕೊರತೆಯಿಲ್ಲ. ಆದರೆ ದೆಹಲಿಯ ಜನರ ಶ್ವಾಸಕೋಶಕ್ಕೆ ಮಾತ್ರ ರಜೆ ಸಿಗುವುದಿಲ್ಲ.

ನೀವು ಧೂಮಪಾನ ಮಾಡುತ್ತೀರಾ? ಇಲ್ಲವೇ? ಒಳ್ಳೆಯದು. ಆದರೆ ಒಂದು ಸಣ್ಣ ಸಮಸ್ಯೆಯಿದೆ. ನೀವು ದೆಹಲಿಯಲ್ಲಿ ವಾಸಿಸುತ್ತಿದ್ದರೆ ಸಿಗರೇಟ್ ಸೇದುವುದನ್ನು ಬಿಟ್ಟರೂ ಪ್ರಯೋಜನವಿಲ್ಲ. ಗಾಳಿಯೇ ನಿಮ್ಮ ಪರವಾಗಿ ದಿನಕ್ಕೆ ಹತ್ತಿಪ್ಪತ್ತು ಸಿಗರೇಟ್ ಸೇದುತ್ತಿದೆ! ಇದಕ್ಕೆ ಹಣ ಕೊಡಬೇಕಿಲ್ಲ, ಅಂಗಡಿಗೆ ಹೋಗಬೇಕಿಲ್ಲ, ಲೈಸೆನ್ಸ್ ಬೇಡ. ಸರ್ಕಾರದ ಕಡೆಯಿಂದ ಸಿಗುವ ಉಚಿತ ಕೊಡುಗೆ ಇದು!

ಪ್ರತಿ ವರ್ಷ ನವೆಂಬರ್ ಬಂತೆಂದರೆ ದೆಹಲಿ ಜಗತ್ತಿನ ಅತಿ ದೊಡ್ಡ ಗ್ಯಾಸ್ ಚೇಂಬರ್ ಆಗುತ್ತದೆ. ಟಿವಿ ತೆರೆದರೆ ನ್ಯಾಯಾಲಯ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತದೆ. ಸರ್ಕಾರ ಮತ್ತೊಂದು ಸರ್ಕಾರವನ್ನು ದೂರುತ್ತದೆ. ಪಂಜಾಬ್ ಹರಿಯಾಣದ ಕಡೆ ಬೆರಳು ತೋರಿಸುತ್ತದೆ; ಹರಿಯಾಣ ದೆಹಲಿಯ ಕಡೆ ನೋಡುತ್ತದೆ. ರಾಜಕಾರಣಿಗಳ ಆರೋಪ-ಪ್ರತ್ಯಾರೋಪಕ್ಕೆ ಮಾತ್ರ ಕೊರತೆಯಿಲ್ಲ. ಆದರೆ ದೆಹಲಿಯ ಜನರ ಶ್ವಾಸಕೋಶಕ್ಕೆ ಮಾತ್ರ ರಜೆ ಸಿಗುವುದಿಲ್ಲ.

ಎಂಬುದು ಗಾಳಿಯ ಗುಣಮಟ್ಟ ಅಳೆಯುವ ಮಾಪಕ. ಅದರ ಸಂಖ್ಯೆ 400500 ತಲುಪಿದರೆ ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಎಂದು ಅರ್ಥಮಾಡಿಕೊಳ್ಳಬಹುದು. ಇದನ್ನು ಸ್ವಲ್ಪ ಸರಳವಾಗಿ ನೋಡೋಣ.

ಒಂದು ಘನ ಮೀಟರ್ ಗಾಳಿಯನ್ನು ಕಲ್ಪಿಸಿಕೊಳ್ಳಿ. ಅಂದರೆ ಸುಮಾರು 3.3 ಅಡಿ ಉದ್ದ, ಅಗಲ ಮತ್ತು ಎತ್ತರವಿರುವ ಒಂದು ಗಾಳಿಯ ಪೆಟ್ಟಿಗೆ. ಭಾರತದ ಮಾನದಂಡದ ಪ್ರಕಾರ, ಅಂಥ ಗಾಳಿಯಲ್ಲಿ 2.5 ಎಂಬ ಅತಿ ಸೂಕ್ಷ್ಮ ಧೂಳಿನ ಕಣಗಳ ಪ್ರಮಾಣ 250 ಮೈಕ್ರೋಗ್ರಾಂಗಿಂತ ಹೆಚ್ಚಾದರೆ, ಅವುಗಳ ಉಪಸೂಚ್ಯಂಕ 401500ರ ತೀವ್ರ ಹಂತ ತಲುಪುತ್ತದೆ. ಒಂದು ಸಣ್ಣ ಹೋಲಿಕೆ ಹೇಳಬೇಕೆಂದರೆ, 250 ಮೈಕ್ರೋಗ್ರಾಂ ಎಂದರೆ 0.25 ಮಿಲಿಗ್ರಾಂ ಮಾತ್ರ. ನಾವು ಸಾಮಾನ್ಯವಾಗಿ ತೆಗೆದುಕೊಳ್ಳುವ 500 ಮಿಲಿಗ್ರಾಂ ಮಾತ್ರೆಯ ತೂಕದ ಎರಡು ಸಾವಿರದ ಒಂದು ಭಾಗದಷ್ಟು! ಇಷ್ಟು ಅಲ್ಪ ಪ್ರಮಾಣದ ಸೂಕ್ಷ್ಮ ಕಣಗಳೂ ಉಸಿರಿನ ಮೂಲಕ ಶ್ವಾಸಕೋಶದ ಆಳಕ್ಕೆ ನುಗ್ಗಬಲ್ಲವು.

ಇನ್ನು 10 ಎಂಬ ಮತ್ತೊಂದು ಬಗೆಯ ಧೂಳಿನ ಕಣಗಳಿವೆ. ಇವು 2.5 ಕಣಗಳಿಗಿಂತ ತುಸು ದೊಡ್ಡವು. ಒಂದು ಘನ ಮೀಟರ್ ಗಾಳಿಯಲ್ಲಿ 10 ಪ್ರಮಾಣ 430 ಮೈಕ್ರೋಗ್ರಾಂಗಿಂತ ಹೆಚ್ಚಾದರೆ, ಅದರ ಉಪಸೂಚ್ಯಂಕವೂ 401500ರ ತೀವ್ರ ಹಂತ ತಲುಪುತ್ತದೆ. ಅಂದರೆ ಕಣ್ಣಿಗೆ ಕಾಣದ ಅಥವಾ ಸುಲಭವಾಗಿ ಗಮನಕ್ಕೆ ಬಾರದ ಧೂಳಿನ ಕಣಗಳೇ ನಮ್ಮ ಉಸಿರಾಟಕ್ಕೆ ಎಷ್ಟು ಅಪಾಯಕಾರಿಯಾಗಬಲ್ಲವು ಎಂಬುದನ್ನು ಊಹಿಸಿ.

ಇಲ್ಲಿ ಒಂದು ಮುಖ್ಯ ಸಂಗತಿಯಿದೆ. ದೆಹಲಿಯ ವಾಯುಮಾಲಿನ್ಯ ಕೇವಲ ದೆಹಲಿ ನಗರದ ಸಮಸ್ಯೆಯಲ್ಲ. ಒಂದು ಜಲಾಶಯಕ್ಕೆ ನೀರು ಅದರ ಸುತ್ತಲಿನ ಸಾವಿರಾರು ಚದರ ಕಿಲೋಮೀಟರ್ ವ್ಯಾಪ್ತಿಯ ಜಲಾನಯನ ಪ್ರದೇಶದಿಂದ ಬರುವಂತೆ, ದೆಹಲಿಯ ಗಾಳಿಯ ಗುಣಮಟ್ಟವನ್ನೂ ಅದರ ಸುತ್ತಲಿನ ವಿಶಾಲ ವಾಯುಪ್ರದೇಶ ನಿರ್ಧರಿಸುತ್ತದೆ. ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ರಾಜಸ್ಥಾನ ಮತ್ತು ದೆಹಲಿಯ ಸುತ್ತಮುತ್ತಲಿನ ಕೃಷಿ, ಕೈಗಾರಿಕೆ, ವಾಹನಗಳು ಹಾಗೂ ನಿರ್ಮಾಣ ಕಾಮಗಾರಿಗಳ ಹೊಗೆ ಮತ್ತು ಧೂಳು ಗಾಳಿಯೊಂದಿಗೆ ಸಂಚರಿಸಿ ದೆಹಲಿಯನ್ನು ತಲುಪುತ್ತವೆ. ಆದ್ದರಿಂದ ದೆಹಲಿಯ ಗಾಳಿಯನ್ನು ಶುದ್ಧಗೊಳಿಸಬೇಕೆಂದರೆ ನಗರದ ಗಡಿಯಲ್ಲಿ ನಿಂತು ಚಿಕಿತ್ಸೆ ಕೊಟ್ಟರೆ ಸಾಲದು; ಇಡೀ ವಾಯುಪ್ರದೇಶವನ್ನು ಒಟ್ಟಾಗಿ ನಿರ್ವಹಿಸಬೇಕು.

ಹೀಗಿರುವಾಗ ನಮ್ಮ ರಾಜಕಾರಣಿಗಳು ಪರಸ್ಪರ ದೂಷಿಸುವುದರಲ್ಲಿ ನಿರತರಾಗಿದ್ದಾರೆ. ಅವರಿಗೆ ಒಂದು ಪ್ರಶ್ನೆ: ನೀವು ಅಧಿಕಾರದ ಕುರ್ಚಿಯಲ್ಲಿ ಕುಳಿತಾಗ ಗಾಳಿ ಶುದ್ಧವಾಗಿರುತ್ತದೆ, ಜನರು ಮಾತ್ರ ಉಸಿರಾಡುವಾಗ ವಿಷವಾಗುತ್ತದೆಯೇ?

ಪಟಾಕಿಯೇ ವಿಲನ್, ಉಳಿದವರೆಲ್ಲ ನಿರಪರಾಧಿಗಳೇ?

ದೀಪಾವಳಿ ಬಂತೆಂದರೆ ಪಟಾಕಿಗಳ ಮೇಲೆ ನಿಷೇಧ, ನ್ಯಾಯಾಲಯದ ಆದೇಶ, ಧಾರ್ಮಿಕ ಭಾವನೆ, ರಾಜಕೀಯ ಹೇಳಿಕೆಗಳು ಶುರುವಾಗುತ್ತವೆ. ಪಟಾಕಿಗಳು ಮಾಲಿನ್ಯ ಹೆಚ್ಚಿಸುತ್ತವೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ದೆಹಲಿಯ ಗಾಳಿಯೆಲ್ಲ ಪಟಾಕಿಗಳಿಂದಲೇ ವಿಷವಾಗುತ್ತದೆಯೇ?

ಒಂದು ಪಾತ್ರೆಯಲ್ಲಿ ನೀರು ಕುದಿಯುವಾಗ ಕೊನೆಯ ಒಂದು ಡಿಗ್ರಿ ಬಿಸಿ ಸಾಕು. ದೆಹಲಿಯ ಪರಿಸ್ಥಿತಿಯೂ ಹಾಗೆಯೇ. ವಾಹನಗಳ ಹೊಗೆ, ಕೈಗಾರಿಕೆಗಳ ಮಾಲಿನ್ಯ, ಹೊಲಗಳ ಕೂಳೆ ಸುಡುವ ಹೊಗೆ, ಕಟ್ಟಡ ನಿರ್ಮಾಣದ ಧೂಳು ಇವೆಲ್ಲ ಸೇರಿ ಗಾಳಿಯನ್ನು ಮೊದಲೇ ವಿಷಮಯವಾಗಿಸಿರುತ್ತವೆ. ಪಟಾಕಿಗಳು ಆ ಬೆಂಕಿಗೆ ತುಪ್ಪ ಸುರಿಯುತ್ತವೆ ಅಷ್ಟೆ.

ಚಳಿಗಾಲದಲ್ಲಿ ಗಾಳಿಯ ಚಲನೆ ಮತ್ತು ವಾತಾವರಣದ ಸ್ಥಿತಿಯಿಂದ ಈ ಮಾಲಿನ್ಯ ಹೊರಹೋಗದೆ ದೆಹಲಿ ಹಾಗೂ ಸುತ್ತಮುತ್ತ ಸಿಲುಕಿಕೊಳ್ಳುತ್ತದೆ. ಹೀಗಿರುವಾಗ ದೆಹಲಿಯ ಗಡಿಯಲ್ಲಿ ಒಂದು ಫಲಕ ಹಾಕಿ ಇಲ್ಲಿ ಮಾಲಿನ್ಯ ಪ್ರವೇಶ ನಿಷಿದ್ಧ ಎಂದರೆ ಸಾಕೇ? ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ರಾಜಸ್ಥಾನ ಮತ್ತು ದೆಹಲಿ ಒಟ್ಟಾಗಿ ಕೆಲಸ ಮಾಡಬೇಕು. ಪ್ರಾದೇಶಿಕ ವಾಯುಮಾಲಿನ್ಯ ನಿರ್ವಹಣಾ ವ್ಯವಸ್ಥೆ ರೂಪಿಸಿ, ಎಲ್ಲರೂ ತಮ್ಮ ಪಾಲಿನ ಹೊಣೆ ಹೊತ್ತುಕೊಳ್ಳಬೇಕು.

ಹಾಗಾದರೆ ಏನು ಮಾಡಬೇಕು?

ನನ್ನ ಪ್ರೀತಿಯ ಓದುಗರೇ, ಮಾಸ್ಕ್ ಹಾಕಿಕೊಳ್ಳಿ ಎಂದು ಹೇಳುವುದು ಸುಲಭ. ಆದರೆ ಮಾಲಿನ್ಯ ಸೃಷ್ಟಿಸುವ ವ್ಯವಸ್ಥೆಯನ್ನೇ ಬದಲಿಸುವುದು ಸರ್ಕಾರದ ಕೆಲಸ. ಅದಕ್ಕೆ ಮೂರು ಕಡೆ ಕೈ ಹಾಕಬೇಕು.

ಮೊದಲು ಕಾರುಗಳ ಸಂಖ್ಯೆಯನ್ನು ಕಡಿಮೆ ಮಾಡಿ; ಮೆಟ್ರೋಗೆ ಹೋಗುವ ದಾರಿಯನ್ನೂ ತೋರಿಸಿ!

ಸರ್ಕಾರ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಿ ಮೆಟ್ರೋ ಕಟ್ಟುತ್ತದೆ. ಉದ್ಘಾಟನೆಯ ದಿನ ಹೂಮಾಲೆ, ಫೋಟೋ, ಭಾಷಣ ಎಲ್ಲವೂ ಭರ್ಜರಿ. ಆದರೆ ಒಬ್ಬ ಹಿರಿಯ ನಾಗರಿಕನಿಗೆ ಮನೆಯ ಬಾಗಿಲಿನಿಂದ ಮೆಟ್ರೋ ನಿಲ್ದಾಣ ತಲುಪಲು ಆಟೋ ಹುಡುಕಬೇಕು. ನಿಲ್ದಾಣದಿಂದ ಕಚೇರಿಗೆ ಹೋಗಲು ಮತ್ತೊಂದು ವಾಹನ ಬೇಕು. ಕೊನೆಗೆ ಆತ ತನ್ನ ಕಾರನ್ನೇ ತೆಗೆದುಕೊಂಡು ಹೋಗುತ್ತಾನೆ. ಆಗ ಮೆಟ್ರೋ ಕಟ್ಟಿದ ಹಣ ಯಾರಿಗಾಗಿ ಖರ್ಚಾಯಿತು ಎಂದು ಕೇಳಬಾರದಾ?

ಮೆಟ್ರೋ ನಿಲ್ದಾಣದಿಂದ ಮನೆಗಳಿಗೆ ಮತ್ತು ಕಚೇರಿಗಳಿಗೆ ಸಣ್ಣ ಬ್ಯಾಟರಿ ವಾಹನಗಳು, ಫೀಡರ್ ಬಸ್‌ಗಳು, ಸುರಕ್ಷಿತ ಪಾದಚಾರಿ ಮಾರ್ಗಗಳು, ಎಲಿವೇಟರ್‌ಗಳು ಇರಬೇಕು. ಅಗತ್ಯವಿರುವಲ್ಲಿ ಚಲಿಸುವ ಪಾದಚಾರಿ ಮಾರ್ಗಗಳನ್ನೂ ನಿರ್ಮಿಸಬಹುದು. ಹಿರಿಯರು, ಮಕ್ಕಳು ಮತ್ತು ಅಂಗವಿಕಲರು ರಸ್ತೆ ದಾಟಲು ಸರ್ಕಸ್ ಮಾಡಬೇಕಾದ ಸ್ಥಿತಿ ಇರಬಾರದು.

ಮಾರುಕಟ್ಟೆ ಪ್ರದೇಶಗಳಲ್ಲಿ ಬಹುಮಹಡಿ ಪಾರ್ಕಿಂಗ್ ನಿರ್ಮಿಸಿ, ಮುಖ್ಯ ವಾಣಿಜ್ಯ ರಸ್ತೆಗಳನ್ನು ವಾಹನಮುಕ್ತ ವಲಯಗಳನ್ನಾಗಿ ಮಾಡಬಹುದು. ಹಳೆಯ ಮತ್ತು ಹೆಚ್ಚು ಹೊಗೆ ಬಿಡುವ ವಾಹನಗಳ ಮೇಲೆ ವರ್ಷಪೂರ್ತಿ ನಿಯಂತ್ರಣ ಇರಬೇಕು. ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು ತಮ್ಮ ನೌಕರರಿಗೆ ಸಾರ್ವಜನಿಕ ಸಾರಿಗೆ ಬಳಸಲು ಪ್ರೋತ್ಸಾಹ ನೀಡಬಹುದು.

ಜನರಿಗೆ ಕಾರು ಬಿಟ್ಟು ಮೆಟ್ರೋ ಬಳಸುವುದು ಸುಲಭವಾಗಬೇಕು. ಇಲ್ಲದಿದ್ದರೆ ಕಾರಿನ ಕೀಲಿಯನ್ನು ಜೇಬಿನಲ್ಲಿಟ್ಟುಕೊಂಡೇ ಮೆಟ್ರೋ ಅಭಿವೃದ್ಧಿಯ ಬಗ್ಗೆ ಭಾಷಣ ಕೇಳುತ್ತಿರುತ್ತಾರೆ!

ಎರಡನೆಯದು, ರೈತನನ್ನು ಬೈಯುವುದಕ್ಕಿಂತ ಬೆಳೆ ಪದ್ಧತಿಯನ್ನು ಬದಲಿಸಿ!

ಪಂಜಾಬ್ ಮತ್ತು ಹರಿಯಾಣದ ರೈತರನ್ನು ಹೊಲದ ಕೂಳೆ ಸುಡುತ್ತಾರೆ ಎಂದು ದೂರುವುದು ಈಗಿನ ಫ್ಯಾಷನ್ ಆಗಿದೆ. ಆದರೆ ಈ ಪರಿಸ್ಥಿತಿ ಹೇಗೆ ಬಂತು ಎಂಬುದನ್ನೂ ಕೇಳಬೇಕಲ್ಲವೇ?

ಸ್ವಾತಂತ್ರ್ಯಾನಂತರ ದೇಶದ ಆಹಾರ ಭದ್ರತೆ ದೊಡ್ಡ ಸವಾಲಾಗಿತ್ತು. ಭಾಕ್ರಾ ನಂಗಲ್ ಅಣೆಕಟ್ಟು ನಿರ್ಮಿಸಿ ನೀರಾವರಿ ಸೌಲಭ್ಯ ವಿಸ್ತರಿಸಲಾಯಿತು. ದೇಶಕ್ಕೆ ಸಾಕಷ್ಟು ಆಹಾರ ಉತ್ಪಾದಿಸಬೇಕೆಂಬ ಉದ್ದೇಶದಿಂದ ಸರ್ಕಾರ ಭತ್ತದ ಕೃಷಿಗೆ ಉತ್ತೇಜನ ನೀಡಿತು. ಮೂಲಕ ಭತ್ತಕ್ಕೆ ಖಚಿತ ಬೆಲೆ ಮತ್ತು ಖರೀದಿ ವ್ಯವಸ್ಥೆ ಕಲ್ಪಿಸಿತು. ರೈತರು ಸಹಜವಾಗಿಯೇ ಲಾಭದಾಯಕ ಬೆಳೆ ಬೆಳೆಯಲು ಮುಂದಾದರು. ಅಂದು ದೇಶದ ಆಹಾರ ಭದ್ರತೆಗೆ ನೆರವಾದ ಈ ನೀತಿ, ಕಾಲಕ್ರಮೇಣ ಅಂತರ್ಜಲದ ಮೇಲೆ ಭಾರಿ ಒತ್ತಡ ತಂದಿತು.

ಈಗ ನೀರು ಕಡಿಮೆಯಾಗಿದೆ. ಭತ್ತದ ನಾಟಿ ಸಮಯವನ್ನು ಮುಂದೂಡುವ ನಿಯಮ ಜಾರಿಯಾಗಿದೆ. ಕೊಯ್ಲು ತಡವಾಗುತ್ತದೆ. ಮುಂದಿನ ಗೋಧಿ ಬೆಳೆಗೆ ಹೊಲ ಸಿದ್ಧಪಡಿಸಲು ರೈತನಿಗೆ ಸಮಯ ಸಾಲದು. ಹೀಗಾಗಿ ಕೂಳೆ ಸುಡುವ ಅನಿವಾರ್ಯತೆ ಎದುರಾಗುತ್ತದೆ.

ಈಗ ರೈತನಿಗೆ ಬೆಂಕಿ ಹಚ್ಚಬೇಡ ಎಂದು ಹೇಳುವುದು ಸುಲಭ. ಆದರೆ ಒಂದು ಪ್ರಶ್ನೆ: ಭತ್ತ ಬೆಳೆಯಬೇಡ ಎಂದರೆ ಅದಕ್ಕೆ ಬದಲಾಗಿ ಯಾವ ಬೆಳೆ ಬೆಳೆಯಬೇಕು? ಅದಕ್ಕೆ ಖರೀದಿದಾರ ಯಾರು? ಬೆಲೆ ಖಾತರಿ ಯಾರು ಕೊಡುತ್ತಾರೆ?

ಜೋಳ, ಸಜ್ಜೆ, ರಾಗಿ, ಬೇಳೆಕಾಳುಗಳಿಗೂ ಭತ್ತದಂತೆ ಖಚಿತ ಮಾರುಕಟ್ಟೆ ಮತ್ತು ಸೂಕ್ತ ನೀಡಬೇಕು. ಬೆಳೆ ಬದಲಿಸಿದರೆ ಆದಾಯ ಕಡಿಮೆಯಾಗುವ ರೈತನಿಗೆ ಪ್ರೋತ್ಸಾಹಧನ ಕೊಡಬೇಕು. ಕೂಳೆಯನ್ನು ಗೊಬ್ಬರವಾಗಿ ಪರಿವರ್ತಿಸಲು ಅಗತ್ಯವಾದ ಯಂತ್ರಗಳನ್ನು ಗ್ರಾಮ ಮಟ್ಟದಲ್ಲಿ ಕಡಿಮೆ ಬಾಡಿಗೆಗೆ ಒದಗಿಸಬೇಕು. ಅದರಿಂದ ಬಯೋಗ್ಯಾಸ್ ಮತ್ತು ಇತರ ಉಪಯುಕ್ತ ಉತ್ಪನ್ನಗಳನ್ನು ತಯಾರಿಸುವ ಘಟಕಗಳನ್ನೂ ಸ್ಥಾಪಿಸಬಹುದು.

ರೈತನಿಗೆ ಪರ್ಯಾಯ ಆದಾಯ ಕೊಟ್ಟರೆ ಹೊಲಕ್ಕೆ ಬೆಂಕಿ ಹಚ್ಚುವ ಅಗತ್ಯವೇ ಇರುವುದಿಲ್ಲ. ರೈತನಿಗೆ ದಂಡ, ಸರ್ಕಾರಕ್ಕೆ ಪ್ರಶಂಸೆ ಇದು ಪರಿಹಾರವಲ್ಲ ಸ್ವಾಮಿ!

ಮೂರನೆಯದು, ಸರ್ಕಾರವೇ ಧೂಳಿನ ಕಾರ್ಖಾನೆ ನಡೆಸುವುದನ್ನು ನಿಲ್ಲಿಸಲಿ!

ಇಲ್ಲಿ ಒಂದು ವಿಚಿತ್ರ ಸಂಗತಿಯಿದೆ. ನಾವು ಕಟ್ಟಡ ನಿರ್ಮಾಣದ ಧೂಳಿನ ಬಗ್ಗೆ ಮಾತನಾಡುತ್ತೇವೆ. ಖಾಸಗಿ ಕಟ್ಟಡಗಳ



ಮೇಲೆ ದಂಡ ಹಾಕುತ್ತೇವೆ. ಆದರೆ ನಮ್ಮ ಕಣ್ಣೆದುರೇ ಸರ್ಕಾರದ ಕಾಮಗಾರಿಗಳು ನಡೆಯುತ್ತಿವೆ.

ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಸ್ಥಳೀಯ ಸಂಸ್ಥೆಗಳು ಪ್ರತಿದಿನ ಸಾವಿರಾರು ಕೋಟಿ ರೂಪಾಯಿ ಮೌಲ್ಯದ ರಸ್ತೆ, ಮೆಟ್ರೋ, ಫ್ಲೈಓವರ್, ಒಳಚರಂಡಿ, ಕುಡಿಯುವ ನೀರು ಮತ್ತು ವಿದ್ಯುತ್ ಕಾಮಗಾರಿಗಳನ್ನು ಹಗಲು-ರಾತ್ರಿ ನಡೆಸುತ್ತಿವೆ. ರಸ್ತೆ ಅಗೆಯುವುದು, ಮಣ್ಣು ರಾಶಿ ಹಾಕುವುದು, ಕಲ್ಲು ಒಡೆಯುವುದು, ಕಾಂಕ್ರೀಟ್ ಕತ್ತರಿಸುವುದು, ಹಳೆಯ ಕಟ್ಟಡಗಳನ್ನು ಕೆಡವುವುದು, ನಿರ್ಮಾಣ ಸಾಮಗ್ರಿ ಸಾಗಿಸುವುದು ಇವೆಲ್ಲವೂ ಒಂದು ರೀತಿಯ ನಗರ ಮಟ್ಟದ ಇದ್ದಂತೆ.

ಇದರಿಂದ ಎಷ್ಟು ಧೂಳು ಏಳುತ್ತದೆ ಎಂಬುದನ್ನು ಯಾರಾದರೂ ಲೆಕ್ಕ ಹಾಕಿದ್ದಾರೆಯೇ? ಕಾಮಗಾರಿ ನಡೆಯುವಾಗ ರಸ್ತೆಯ ಮೇಲೆ ಮಣ್ಣಿನ ಮೋಡ ಏಳುತ್ತದೆ. ಕೆಲಸ ಮುಗಿದ ಮೇಲೆ ತಿಂಗಳುಗಟ್ಟಲೆ ಮಣ್ಣು ಹಾಗೆಯೇ ಉಳಿಯುತ್ತದೆ. ಮಳೆ ಬಂದರೆ ಕೆಸರು, ಗಾಳಿ ಬೀಸಿದರೆ ಧೂಳು. ನಂತರ ಅದೇ ಸರ್ಕಾರ ಸ್ಮಾಗ್ ಗನ್ ತಂದು ನೀರು ಸಿಂಪಡಿಸುತ್ತದೆ!

ಅಭಿವೃದ್ಧಿಯ ಹೆಸರಿನಲ್ಲಿ ಸರ್ಕಾರವೇ ಧೂಳಿನ ಕಾರ್ಖಾನೆ ನಡೆಸಿ, ನಂತರ ಅದೇ ಧೂಳನ್ನು ನಿಯಂತ್ರಿಸಲು ಸ್ಮಾಗ್ ಗನ್ ಖರೀದಿಸುವುದು ಯಾವ ರೀತಿಯ ಆಡಳಿತ ಬುದ್ಧಿವಂತಿಕೆ?

ಸರ್ಕಾರಿ ಕಾಮಗಾರಿಗಳಿಗೂ ಖಾಸಗಿ ಕಟ್ಟಡಗಳಿಗೂ ಒಂದೇ ನಿಯಮ ಇರಬೇಕು. ರಸ್ತೆ ಅಗೆಯುವ ಮೊದಲು ಧೂಳು ನಿಯಂತ್ರಣದ ಯೋಜನೆ ಇರಬೇಕು. ಮಣ್ಣು, ಮರಳು ಮತ್ತು ಸಿಮೆಂಟ್ ಮುಚ್ಚಿದ ವಾಹನಗಳಲ್ಲಿ ಸಾಗಬೇಕು. ನಿರ್ಮಾಣ ಸ್ಥಳಗಳನ್ನು ಹಸಿರು ಪರದೆಗಳಿಂದ ಮುಚ್ಚಬೇಕು. ರಸ್ತೆ ಮೇಲೆ ಬಿದ್ದ ಮಣ್ಣನ್ನು ತಕ್ಷಣ ತೆರವುಗೊಳಿಸಬೇಕು. ಅಗತ್ಯವಿರುವಲ್ಲಿ ನೀರು ಸಿಂಪಡಿಸುವ ಯಂತ್ರ ಮತ್ತು ಸ್ಮಾಗ್ ಗನ್ ಬಳಸಬೇಕು. ಕಾಮಗಾರಿ ಮುಗಿದ ಕೂಡಲೇ ರಸ್ತೆ ದುರಸ್ತಿ ಮಾಡಬೇಕು.

ಇವೆಲ್ಲವೂ ಟೆಂಡರ್‌ನಲ್ಲೇ ಕಡ್ಡಾಯ ಷರತ್ತುಗಳಾಗಿರಬೇಕು. ಗುತ್ತಿಗೆದಾರರಿಗೆ ಹಣ ಕೊಡುವಾಗ ಕೆಲಸದ ಗುಣಮಟ್ಟದ ಜೊತೆಗೆ ಪರಿಸರ ನಿಯಮ ಪಾಲನೆಯನ್ನೂ ಪರಿಶೀಲಿಸಬೇಕು. ನಿಯಮ ಉಲ್ಲಂಘಿಸಿದರೆ ದಂಡ ಮಾತ್ರವಲ್ಲ, ಮರುಮರು ತಪ್ಪು ಮಾಡಿದರೆ ಗುತ್ತಿಗೆಯನ್ನೇ ರದ್ದುಪಡಿಸಬೇಕು.

ಇನ್ನು ಒಣ ಎಲೆ ಮತ್ತು ಕಸ ಸುಡುವುದನ್ನು ನಿಲ್ಲಿಸಬೇಕು. ಪ್ರತಿ ವಾರ್ಡ್‌ನಲ್ಲೂ ಎಲೆಗಳಿಂದ ಗೊಬ್ಬರ ತಯಾರಿಸುವ ವ್ಯವಸ್ಥೆ ಇರಬೇಕು. ಕಸ ಸಂಗ್ರಹಿಸಲು ಸರಿಯಾದ ವ್ಯವಸ್ಥೆ ಮಾಡದೆ ಜನರಿಗೆ ಕಸ ಸುಡಬೇಡಿ ಎಂದು ಹೇಳುವುದರಲ್ಲಿ ಅರ್ಥವಿದೆಯೇ?

ಕೊನೆಯದಾಗಿ, ಒಂದು ಸಣ್ಣ ಪ್ರಶ್ನೆ

ಪ್ರತಿ ವರ್ಷ ನವೆಂಬರ್‌ನಲ್ಲಿ ದೆಹಲಿಯ ಗಾಳಿ ವಿಷವಾಗುತ್ತದೆ. ನ್ಯಾಯಾಲಯಗಳು ಎಚ್ಚರಿಸುತ್ತವೆ. ಸಮಿತಿಗಳು ವರದಿ ಕೊಡುತ್ತವೆ. ಸರ್ಕಾರಗಳು ಸಭೆ ನಡೆಸುತ್ತವೆ. ರಾಜಕಾರಣಿಗಳು ಪರಸ್ಪರ ಆರೋಪ ಮಾಡುತ್ತಾರೆ. ಬೇಸಿಗೆ ಬಂದಾಗ ಎಲ್ಲರೂ ಮರೆತುಬಿಡುತ್ತಾರೆ. ಮುಂದಿನ ನವೆಂಬರ್‌ಗೆ ಮತ್ತೆ ಅದೇ ನಾಟಕ!

ನಮ್ಮ ಸಮಸ್ಯೆ ಪರಿಹಾರಗಳ ಕೊರತೆಯಲ್ಲ; ಅವುಗಳನ್ನು ಜಾರಿಗೆ ತರುವ ರಾಜಕೀಯ ಇಚ್ಛಾಶಕ್ತಿಯ ಕೊರತೆ.

ಜನರಿಗೆ ಮಾಸ್ಕ್ ಕೊಡುವುದಕ್ಕಿಂತ ಶುದ್ಧ ಗಾಳಿ ಕೊಡುವುದು ಸರ್ಕಾರದ ಕರ್ತವ್ಯವಲ್ಲವೇ?

ಕಾಲಿನೋವಿಗೆ ಬೆನ್ನುಹುರಿಯಲ್ಲಿ ಚಿಕಿತ್ಸೆ ಬೇಕು. ದೆಹಲಿಯ ಮಾಲಿನ್ಯಕ್ಕೂ ಹಾಗೆಯೇ. ಇಲ್ಲದಿದ್ದರೆ ಜನರು ಹತ್ತಿಪ್ಪತ್ತು ಸಿಗರೇಟ್ ಸೇದದಿದ್ದರೂ ಗಾಳಿಯ ಮೂಲಕ ಅದರ ಬೆಲೆ ತೆರುತ್ತಾರೆ. ರಾಜಕಾರಣಿಗಳು ಮಾತ್ರ ಮಾಲಿನ್ಯದ ಹೊಗೆಯಲ್ಲೇ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿರುತ್ತಾರೆ!



Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR